ವಿಜಯಪುರ | ಸಂಪುಟ 04 | ಸಂಚಿಕೆ 092 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ಶುಕ್ರವಾರ, ಮೇ, 29, 2026

"ನಾಡು ಕಂಡ ಸುದೀರ್ಘ ಅವಧಿಯ ಮುಖ್ಯಮಂತ್ರಿ ಎಂದು ಇತಿಹಾಸದಲ್ಲಿ ದಾಖಲಾಗುವುದಕ್ಕಿಂತ ಹೆಚ್ಚಾಗಿ ನಾಡಿನ ಅಭಿವೃದ್ಧಿಗೆ ಮಹತ್ವದ ಯೋಜನೆಗಳನ್ನು ನೀಡಿದ ಮುಖ್ಯಮಂತ್ರಿ ನಾನಾಗಬೇಕು ಎನ್ನುವ ಹಂಬಲದಿಂದ ಇಲ್ಲಿಯವರೆಗೆ ಶ್ರದ್ಧೆಯಿಂದ ಕೆಲಸ ಮಾಡಿದ್ದೇನೆ."



■ ಸಿದ್ದರಾಮಯ್ಯ ಮುಖ್ಯಮಂತ್ರಿ

## ‘ನಾನು ಪ್ರೀತಿ-ವಿಶ್ವಾಸಗಳಿಗೆ ತಲೆಬಾಗುವವನೇ ಹೊರತು ಒತ್ತಡ-ಪ್ರಭಾವಗಳಿಗೆ ಒಳಗಾಗುವವನಲ್ಲ’ | ವಿದಾಯ ಭಾಷಣದಲ್ಲಿ ಸಿಎಂ ಸಿದ್ದರಾಮಯ್ಯ ಸ್ಪಷ್ಟನೆ

# ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯಭಾರ ಅಂತ್ಯ!

ಬೆಂಗಳೂರು: ಹೈಕಮಾಂಡ್ ಯಾವಾಗ ಸೂಚಿಸುತ್ತದೆಯೋ ಆಗ ರಾಜೀನಾಮೆ ಕೊಡುತ್ತೇನೆ ಎಂದು ಹೇಳಿದ್ದ ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಮೇ 28 ರಂದು ಹೈಕಮಾಂಡ್ ಸೂಚನೆ ಮೇರೆಗೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಈ ಮೂಲಕ ಕರ್ನಾಟಕ ರಾಜಕಾರಣದಲ್ಲಿ ನಡೆಯುತ್ತಿದ್ದ ಕುರ್ಚಿ ಕಾಳಗಗಕ್ಕೆ ಕೊನೆಗೂ ಕ್ಲೈಮ್ಯಾಕ್ಸ್ ದೊರೆತಿದೆ.

ಈ ಕುರಿತು ಪತ್ರಿಕಾಗೋಷ್ಠಿ ನಡೆಸಿರುವ ಸಿದ್ದರಾಮಯ್ಯ ಹೈಕಮಾಂಡ್ ಮೊನ್ನೆ ರಾಜೀನಾಮೆ ಕೊಡಿ ಎಂದು ಹೇಳಿದ್ದರು. ಹಾಗಾಗಿ, ಇವತ್ತು ರಾಜೀನಾಮೆ ಸಲ್ಲಿಸುತ್ತಿದ್ದೇನೆ. ರಾಜ್ಯಪಾಲರು ಬಂದ ಮೇಲೆ ನನ್ನ ರಾಜೀನಾಮೆ ಅಂಗೀಕಾರ ಮಾಡುತ್ತಾರೆ ಎಂದು ಹೇಳಿದ್ದಾರೆ.

ಈ ವೇಳೆ ನಾಡಿನ ಜನತೆಯನ್ನು ಉದ್ದೇಶಿಸಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಶಕಗಳ ಕಾಲ ಸಾರ್ವಜನಿಕ ಜೀವನದಲ್ಲಿರುವ ನನ್ನ ಬಗ್ಗೆ ರಾಜ್ಯದ ಜನತೆಗೆ ತಿಳಿದಿದೆ. ನಾನು ಪ್ರೀತಿ-ವಿಶ್ವಾಸಗಳಿಗೆ ತಲೆಬಾಗುವವನೇ ಹೊರತು ಒತ್ತಡ-ಪ್ರಭಾವಗಳಿಗೆ ಒಳಗಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುವ ಜಾಯಮಾನದವನಲ್ಲ. ಈ ರಾಜೀನಾಮೆ ಪತ್ರವನ್ನು ಕೂಡಾ ಅತ್ಯಂತ ಸಂತೋಷದಿಂದ ಮನಪೂರ್ವಕವಾಗಿ ನೀಡಿದ್ದೇನೆ ಎಂದಿದ್ದಾರೆ.

ನಾನು ದುಡ್ಡು, ಆಸ್ತಿಪಾಸ್ತಿ ಮಾಡಲು ರಾಜಕಾರಣಿ ಆದವನಲ್ಲ. ಮತದಾರ ದೇವರುಗಳು ಅಧಿಕಾರದ ಮೂಲಕ ಅವಕಾಶ ನೀಡಿದಾಗೆಲ್ಲ ಅವರ ಕಲ್ಯಾಣಕ್ಕಾಗಿ ಶ್ರಮಿಸಿದ್ದೇನೆ. ಈ ಸಂದರ್ಭದಲ್ಲಿ ನನ್ನ ಸಾಧನೆಗಳ ದಾಖಲೆಗಳನ್ನು ನಾನು ನಿಮ್ಮ ಮುಂದೆ ಇಟ್ಟ ನನ್ನನ್ನು ಸಾಬೀತುಪಡಿಸು ವ್ಯಥ-'ಪ್ರಯತ್ನವನನ್ನು ನಾನು ಮಾಡುವುದಿಲ್ಲ., ಅವೆಲ್ಲವೂ ತೆರೆದ ಪುಸ್ತಕದ ರೀತಿಯಲ್ಲಿ ರಾಜ್ಯದ ಜನತೆಯ ಕಣ್ಣಮುಂದಿದೆ ಎಂದಿದ್ದಾರೆ.

ರಾಜಕಾರಣಿಗಳಿಗೆ ನಿವೃತ್ತಿ ಇಲ್ಲ, ನಾನು ಚುನಾವಣಾ ರಾಜಕಾರಣದಿಂದ ದೂರ ಸರಿಯಬಹುದು, ಆದರೆ ರಾಜಕೀಯ ಕ್ಷೇತ್ರದಲ್ಲಿರುತ್ತೇನೆ. ಮುಂಬರುವ ದಿನಗಳಲ್ಲಿ ರಾಜ್ಯದ ಜನತೆ ಇಲ್ಲವೆ ಪಕ್ಷ ನೀಡುವ ಕರೆಗೆ ಓಗೊಟ್ಟು ಸಹಕಾರ ನೀಡುತ್ತೇನೆ ಎಂದು ಸಿದ್ದರಾಮಯ್ಯ ಹೇಳಿದರು.



ಕರ್ನಾಟಕದ ಜನತೆ, ವಿಶೇಷವಾಗಿ ನಾಡಿನ ಮೂಲೆಮೂಲೆಗಳಲ್ಲಿರುವ ದೀನದಲಿತರು, ದಮನಿತರು, ದನಿಯಿಲ್ಲದವರು, ಅಶಕ್ತರು, ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದವರು ನನ್ನನ್ನು ತಮ್ಮ ದನಿಯಾಗಿಸಿಕೊಂಡಿದ್ದಕ್ಕೆ ನಾನು ಚಿರಋಣಿಯಾಗಿರುತ್ತೇನೆ. ಅವರು ನನ್ನಲ್ಲಿ ತುಂಬಿದ ಶಕ್ತಿಯಿಂದಾಗಿಯೇ ನಾನು ನಾಡಿನ ಜನತೆಯ ಸೇವೆಯನ್ನು ಇಷ್ಟು ದೀರ್ಘಕಾಲ ಮಾಡಲು ಸಾಧ್ಯವಾಗಿದೆ ಎಂದು ಸಿದ್ದರಾಮಯ್ಯ ಭಾವುಕರಾಗಿ ನುಡಿದರು.

### ನಾನೆಂದೂ ನಂಬಿದ ಮೌಲ್ಯಗಳ ಜೊತೆ ರಾಜಿಮಾಡಿಕೊಂಡಿಲ್ಲ



ನಾನು ಮಾತ್ರವಲ್ಲ ನನ್ನ ಕುಟುಂಬ ಕೂಡಾ ರಾಜಕೀಯ ದ್ವೇಷಕ್ಕೆ ಬಲಿಯಾಗಿದೆ, ನನ್ನ ರಾಜಕೀಯ ವಿರೋಧಿಗಳು ರಾಜಕಾರಣಕ್ಕಿಂತ ಬಹುದೂರ ಇದ್ದುಕೊಂಡು ಕುಟುಂಬದ ಪಾಲನೆ-ಪೋಷಣೆಗಷ್ಟೇ ತನ್ನನ್ನು ಸೀಮಿತಗೊಳಿಸಿಕೊಂಡ ನನ್ನ ಪತ್ನಿಯ ವಿರುದ್ದವೂ ಸುಳ್ಳು ಆರೋಪಗಳನ್ನು ಮಾಡಿ ಮಾನಸಿಕ ಹಿಂಸೆ ನೀಡಿದ್ದರು. ಇವೆಲ್ಲವನ್ನೂ ಅನುಭವಿಸಿದಾಗ ರಾಜಕೀಯ ಸನ್ಯಾಸ ತೆಗೆದುಕೊಂಡು ಬಿಡುವ ಎನ್ನುವಷ್ಟು ಮನಸ್ಸು ನೊಂದಿತ್ತು. ಆದ-'ರೆ ಶತ್ರುಗಳ ದಾಳಿಗೆ ಹೆದರಿ ಪಲಾಯನವಾದಿಯಾಗ ಬೇಡ, ಜನಸೇವೆಯ ಪಥದಿಂದ ಹಿಂದಡಿ ಇಡಬೇಡ, ಎಂದು ನನ್ನ ಅಂತಾರಾತ್ಮ ಎಚ್ಚರಿಸಿತು. ಅನ್ಯಾಯದ ವಿರುದ್ದ ನ್ಯಾಯದ ಹೋರಾಟವನ್ನು ಮುಂದುವರಿಸಿ ಆರೋಪಿತ ಕಳಂಕವನ್ನು ನಿವಾರಿಸಿಕೊಂಡು ನಿರಾಳನಾದೆ. ನನ್ನ ನೋವು,ದು:ಖ-ದುಮ್ಮಾನಗಳನ್ನು ಈ ಸಂದರ್ಭದಲ್ಲಿ ಪಟ್ಟಿಮಾಡಿ ನನ್ನ ಮನಸ್ಸನ್ನು ಕಹಿಮಾಡಿಕೊಳ್ಳುವುದಿಲ್ಲ. ಆದರೆ ಈ ಸಂಘರ್ಷದ ಹಾದಿಯಲ್ಲಿ ನಾನೆಂದೂ ನಂಬಿದ ಮೌಲ್ಯಗಳ ಜೊತೆ ರಾಜಿಮಾಡಿಕೊಂಡಿಲ್ಲ. ನಂಬಿದ ಜನತೆಗೆ ದ್ರೋಹ ಬಗೆದಿಲ್ಲ, ನನ್ನ ಆತ್ಮಸಾಕ್ಷಿಗೆ ವಂಚನೆ ಮಾಡಿಕೊಂಡಿಲ್ಲ. ಹೋರಾಟವನ್ನೇ ಬದುಕಾಗಿಸಿ ಸ್ವೀಕರಿಸಿ ಇಷ್ಟು ದೂರ ಬಂದಿದ್ದೇನೆ ಎಂದು ಸಿಎಂ ಸಿದ್ದರಾಮಯ್ಯ ಭಾವುಕರಾಗಿ ನುಡಿದರು.



## ಸಿಎಂ ಸಿದ್ದರಾಮಯ್ಯ ರಾಜೀನಾಮೆಗೆ ಕುರುಬ ಸಮಾಜದ ಆಕ್ರೋಶ

■ ಉದಯರಶ್ಮಿ ದಿನಪತ್ರಿಕೆ

ಸಿಂದಗಿ: ಸಿಎಂ ಸ್ಥಾನಕ್ಕೆ ಸಿದ್ದರಾಮಯ್ಯ ಅವರ ರಾಜೀನಾಮೆ ಅಹಿಂದ ವರ್ಗಕ್ಕೆ ಸಾಕಷ್ಟು ನೋವುಂಟುಮಾಡಿದೆ. ಅಹಿಂದ ವರ್ಗಗಳ ಮತ ಪಡೆದ ಶಾಸಕ ಅಶೋಕ ಮನಗೂಳಿ ಅವರು ಕೂಡಲೇ ರಾಜೀನಾಮೆ ಕೊಡಬೇಕೆಂದು ಸಮಾಜದ ಮುಖಂಡ ಮಲ್ಲಿಕಾರ್ಜುನ ಸಾವಳಸಂಗ ಆಗ್ರಹಿಸಿದ್ದಾರೆ.

ಸಿಂದಗಿ ನಗರದ ಬಸವೇಶ್ವರ ವೃತ್ತದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ರಾಜೀನಾಮೆ ನೀಡಲು ಒತ್ತಡ ಹಾಕಲಾಗಿದೆ ಎಂದು ಆರೋಪಿಸಿ ಕಾಂಗ್ರೆಸ್ ಹೈಕಮಾಂಡ್ ವಿರುದ್ಧ ಗುರುವಾರ ಕುರುಬ ಸಂಘ ತಾಲೂಕು ಘಟಕದಿಂದ ಪ್ರತಿಭಟನೆ ನಡೆಸಿ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಸಿದ್ದರಾಮಯ್ಯ ಹಾಗೂ ಅವರ ಅಹಿಂದ ಬೆಂಬಲವೇ ಕಾರಣ. ಸಿದ್ದರಾಮಯ್ಯ ರಾಜೀನಾಮೆ ನೀಡಿದರೆ ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಭಾರಿ ಹಿನ್ನಡೆ ಎದುರಿಸಬೇಕಾಗುತ್ತದೆ. ರಾಜ್ಯಕ್ಕೆ ಗ್ಯಾರಂಟಿ ನೀಡಿ, ಅದನ್ನು ವ್ಯವಸ್ಥಿತವಾಗಿ ನಿಭಾಯಿಸಿರುವ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸುವ ಉದ್ದೇಶ ಏನು? 2028ರವರೆಗೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿರಲಿದ್ದಾರೆ ಎನ್ನುವ ಕಾರಣಕ್ಕೆ ಅಹಿಂದ ಸಮಾಜವು ಶೇ.90ರಷ್ಟು ಮತ ಹಾಕಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತಂದಿದೆ. ಕಾಂಗ್ರೆಸ್ ಸರ್ಕಾರ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಿದರ ಮುಂಬರುವ 2028ರ ಚುನಾವಣೆಯಲ್ಲಿ ಅಹಿಂದ ಒಕ್ಕೂಟ ತಕ್ಕ ಪಾಠ ಕಲಿಸಲಿದೆ ಎಂದು ಎಚ್ಚರಿಸಿದರು.

ಈ ವೇಳೆ ತಳವಾರ ಸಮಾಜದ ಮುಖಂಡ ಪೀರು ಕೆರೂರ ಮಾತನಾಡಿದರು. ಸುಡುವ ಬಿಸಿಲಿನಲ್ಲಿ ಜಮಾಯಿಸಿದ್ದ ಸಿಂದಗಿ ಮತ್ತು ಆಲಮೇಲ ಕುರುಬ ಸಂಘದ ಜನರು ಕಾಂಗ್ರೆಸ್ ಹೈಕಮಾಂಡ್ ವಿರುದ್ಧ ಘೋಷಣೆ ಮೊಳಗಿಸಿ ಆಕ್ರೋಶ ಹೊರಹಾಕಿದರು.

ಪ್ರತಿಭಟನೆಯಲ್ಲಿ ಕುರುಬ ಸಂಘದ ತಾಲೂಕಾಧ್ಯಕ್ಷ ನಿಂಗಣ್ಣ ಬುಳ್ಳಾ, ಆಲಮೇಲ ತಾಲೂಕು ಕುರುಬ ಸಂಘದ ಅಧ್ಯಕ್ಷ ಸಿದ್ದು ಕರಿಗೊಂಡ, ಪೀರು ಕೆರೂರ, ಶಿವಾನಂದ ಗಣಿಹಾರ, ದತ್ತು ಎಡಗಿ, ಯಲ್ಲು ಬಮನಳ್ಳಿ, ಭೀಮರಾಯ ಸೀತಿಮನಿ, ಮಾಳು ಗಡೆದ, ಲಕ್ಷ್ಮಣ್ಣ ಜೇವರ್ಗಿ, ಬಾಪುಗೌಡ ಪಾಟೀಲ, ಸಿದ್ದು ತಮದೊಡ್ಡಿ, ನಿಂಗಣ್ಣ ಬಿಸನಾಳ, ವಿಠ್ಠಲ ನಾಯ್ಕೋಡಿ, ಮಡಿವಾಳಪ್ಪ ಪೂಜಾರಿ, ಬಸನಗೌಡ ಪಾಟೀಲ ಸೇರಿದಂತೆ ಸಿದ್ದರಾಮಯ್ಯನ ಅವರ ಅಭಿಮಾನಿಗಳು ಇದ್ದರು.

### ಚಾಮರಾಜನಗರ ಜಿಲ್ಲೆಯ ಯಳಂದೂರಿನ ಹಿರಿಯ ಪತ್ರಕರ್ತ ನಾಗರಾಜ ಅಭಿಮತ

## ಇಂದುಶೇಖರ ಗೆ ಸಂದ ಪ್ರಶಸ್ತಿ ಅವರ ಸೇವೆಗೆ ಸಂದ ಗೌರವ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಜಿಲ್ಲೆಯ ಹಿರಿಯ ಪತ್ರಕರ್ತ ಹಾಗೂ 'ಉದಯರಶ್ಮಿ' ದಿನಪತ್ರಿಕೆ ಸಂಪಾದಕ ಇಂದುಶೇಖರ ಮಣೂರ ಅವರು ಈಚೆಗೆ 'ಬಸವ ಸೇವಾ ಪ್ರಶಸ್ತಿ' ಗೌರವಕ್ಕೆ ಭಾಜನರಾದ ಪ್ರಯುಕ್ತ ಚಾಮರಾಜನಗರ ಜಿಲ್ಲೆಯ ಯಳಂದೂರಿನ ಹಿರಿಯ ಪತ್ರಕರ್ತ ನಾಗರಾಜ ಅವರು ತಮ್ಮ ಸ್ವಗೃಹದಲ್ಲಿ ಸನ್ಮಾನಿಸಿ ಗೌರವಿಸಿದರು.

ಈ ವೇಳೆ ಮಾತನಾಡಿದ ಪತ್ರಕರ್ತ ನಾಗರಾಜ ಅವರು, ವಚನ ಸಾಹಿತ್ಯ ಮತ್ತು ಶರಣ ಸಂಸ್ಕೃತಿಯ ಪ್ರಸಾರಕ್ಕಾಗಿ ಶ್ರಮಿಸುತ್ತಿರುವ ಸನ್ಮಿತ್ರ ಇಂದುಶೇಖರ ಅವರ ಶ್ರಮ ಮತ್ತು ಬದ್ಧತೆಯನ್ನು ಗೌರವಿಸಲು ಮಾನವೀಯತೆ ಹಾಗೂ ಸಮಾನತೆಯ ಸಂದೇಶವನ್ನು ಸಾರಿದ ವಿಶ್ವಗುರು ಬಸವಣ್ಣನವರ ಹೆಸರಿನ ಪ್ರಶಸ್ತಿ ಅವ-ರಿಗೆ ಸಂದಿರುವುದು ಅವರ ಸೇವೆಗೆ ಸಂದ ಗೌರವ ಎಂದು ಅಭಿಪ್ರಾಯಿಸಿದರು.



ಸನ್ಮಾನಕ್ಕೆ ಪ್ರತಿಯಾಗಿ ಮಾತನಾಡಿದ ಕಾರ್ಯನಿರತ ಪತ್ರಕರ್ತರ ಸಂಘದ ವಿಜಯಪುರ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಇಂದುಶೇಖರ ಮಣೂರ ಮಾತನಾಡಿ, ಎಲ್ಲಿಯ ವಿಜಯಪುರ, ಎಲ್ಲಿಯ ಚಾಮರಾಜನಗರ.. ನಾಗರಾಜ ಅವರೊಂದಿಗಿನ ಸ್ನೇಹತಂತು ದಾರಿ ದೂರವಿದ್ದರೂ ಭಾವಗಳು ಸದಾ ಜೊತೆಯಾಗಿ ಸಾಗಿವೆ. ಅವರ ಜೀವನ ಪ್ರೀತಿ, ನೊಂದವರಿಗೆ ಸದಾ ಸ್ಪಂದಿಸುವ, ಸಹಾಯ ಹಸ್ತ ಚಾಚುವ ಅವರ ಮಾನವೀಯ ಕಳಕಳಿ ಅನನ್ಯ ಎಂದು ಶ್ಲಾಘಿಸಿದರು.

ಈ ವೇಳೆ ಸ್ಥಳೀಯ ಹಿರಿಯ ಪತ್ರಕರ್ತ ನಾಗೇಂದ್ರ, ರಾಜು ಕೆರುಟಗಿ, ಶ್ರೀಮತಿ ಶೋಭಾ ನಾಗರಾಜ, ಚೇತನ ನಾಗರಾಜ, ಜೀವನ್ ನಾಗರಾಜ, 'ಉದಯರಶ್ಮಿ' ಪ್ರಕಾಶಕಿ ಶ್ರೀಮತಿ ಶೈಲಾ ಮಣೂರ ಸೇರಿದಂತೆ ಹಲವರಿದ್ದರು.

### ಮಕ್ಕಳಿಗೆ ತಪ್ಪದೇ ಲಸಿಕೆ ಹಾಕಿಕೊಳ್ಳಬೇಕು: ಡಿಸಿ ಶರೀಫ

ಕಲಬುರಗಿ: ಜಿಲ್ಲೆಯಾದ್ಯಂತ ಪಲ್ಸ್ ಪೊಲಿಯೋ ಲಸಿಕಾ ಕಾರ್ಯಕ್ರಮ ಜೂ.28ರಂದು ನಡೆಯಲಿದೆ. ಈ ಹಿನ್ನೆಲೆಯಲ್ಲಿ 0 ರಿಂದ 5 ವರ್ಷದೊಳಗಿನ ಎಲ್ಲ ಮಕ್ಕಳು ತಪ್ಪದೇ ಲಸಿಕೆ ಹಾಕಿಕೊಳ್ಳಬೇಕು. 'ಹೈ ರಿಸ್ಕ್' ಪ್ರದೇಶಗಳಾದ ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ ಹಾಗೂ ಹೆದ್ದಾರಿಗಳ ಮೇಲೆ ತೀವ್ರ ನಿಗಾವಹಿಸಿ. ಎಂದು ಡಿಸಿ ಸಲಹೆ ನೀಡಿದರು.

### ಬಬಲೇಶ್ವರ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಪ್ರೀತಿ ಗಡೇದ ಕರೆ

## ತ್ಯಾಜ್ಯ ಮುಕ್ತ ಪಟ್ಟಣವನ್ನಾಗಿಸಲು ಸಾರ್ವಜನಿಕರು ಸಹಕರಿಸಿ

■ ಉದಯರಶ್ಮಿ ದಿನಪತ್ರಿಕೆ



ಬಬಲೇಶ್ವರ: ಪಟ್ಟಣದ ಸ್ವಚ್ಛತೆಗೆ ಮತ್ತು ನಾಗರಿಕರ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಸರ್ಕಾರವು ಘನತ್ಯಾಜ್ಯ ನಿರ್ವಹಣೆ ನಿಯಮಗಳನ್ನು ಹೊಸದಾಗಿ ಜಾರಿಗೆ ತಂದಿದೆ. ಕಾರಣ ಬಬಲೇಶ್ವರ ಪಟ್ಟಣವನ್ನು ತ್ಯಾಜ್ಯ ಮುಕ್ತ ಸುಂದರ ಪಟ್ಟಣವನ್ನಾಗಿ ಮಾಡಲು ಪಟ್ಟಣ ಪಂಚಾಯತಿಯೊಂದಿಗೆ ಸಾರ್ವಜನಿಕರು ಹಾಗೂ ಉದ್ದಿಮೆದಾರರೊಳಗೊಂಡು ಪ್ರತಿಯೊಬ್ಬ ನಾಗ-ರಿಕರು ಸಹಕರಿಸಬೇಕು ಎಂದು ಪಟ್ಟಣ ಪಂಚಾಯತ ಮುಖ್ಯಾಧಿಕಾರಿ ಪ್ರೀತಿ ಗಡೇದ ಹೇಳಿದರು.

ಪಟ್ಟಣದಲ್ಲಿ ಬುಧವಾರ ಘನತ್ಯಾಜ್ಯ ನಿಯಮ 2026 ರ ಅನುಷ್ಠಾನಕ್ಕೆ ಸಹಕರಿಸಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಸ್ವಚ್ಛತೆ ಎನ್ನುವುದು ಕೇವಲ ಯಾರೋ ಒಬ್ಬರ ಜವಾಬ್ದಾರಿಯಲ್ಲ, ಅದು ಪ್ರತಿಯೊಬ್ಬ ನಾಗರಿಕನ ಆದ್ಯ ಕರ್ತವ್ಯ ಮತ್ತು ಸ್ವಚ್ಛ ಸಮಾಜವೇ ಪ್ರಗತಿಪರ ದೇಶದ ಅಡಿಪಾಯ. ಆದ್ದರಿಂದ ಇಂದಿನಿಂದಲೇ ನಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಂಡು ಆರೋಗ್ಯವಂತ ಭಾರತ ನಿರ್ಮಿಸೋಣ ಎಂದರು.

ತ್ಯಾಜ್ಯದ ಮೂಲ ವರ್ಗೀಕರಣ ನಿಮ್ಮ ಮನೆಯ ತ್ಯಾಜ್ಯವನ್ನು ಪಟ್ಟಣ ಪಂಚಾಯತ ವಾಹನಕ್ಕೆ ನೀಡುವಾಗಲೇ ನಾಲ್ಕು ಭಾಗಗಳ ಕಸವನ್ನಾಗಿ ವಿಂಗಡಿಸಿ ನೀಡಬೇಕು. ಹಸಿ ತ್ಯಾಜ್ಯ: ಅಡುಗೆ ಮನೆ ತ್ಯಾಜ್ಯ, ಹಣ್ಣು-ತರಕಾರಿ ಸಿಪ್ಪೆ, ಎಲೆಗಳು. ಒಣ ತ್ಯಾಜ್ಯ: ಪ್ಲಾಸ್ಟಿಕ್, ಪೇಪರ್, ಗಾಜು, ಲೋಹದ ವಸ್ತುಗಳು. ಸ್ಯಾನಿಟರ್ ತ್ಯಾಜ್ಯ : ಬಳಸಿದ ಳಸಿದ ಡೈಪರ್‌ಗಳು, ಸ್ಯಾನಿಟರಿ ನ್ಯಾಪ್‌ಕಿನ್‌ಗಳು (ಇವುಗಳನ್ನು ಕಾಗದದಲ್ಲಿ ಸುತ್ತಿ ಪ್ರತ್ಯೇಕವಾಗಿ ನೀಡಬೇಕು. ಹಾಗೂ ವಿಶೇಷ ಕಾಳಜಿಯ ತ್ಯಾಜ್ಯ: ಬ್ಯಾಟರಿಗಳು, ಟ್ಯೂಬ್ ಲೈಟ್ಗಳು, ಪೇಂಟ್ ಡಬ್ಬಿಗಳು ಮತ್ತು ಕಾಲಾವಧಿ ಮುಗಿದ ಔಷಧಿಗಳು, ಮತ್ತು ದಿನಕ್ಕೆ 100 ಕೆಜಿಗಿಂತ ಹೆಚ್ಚು ತ್ಯಾಜ್ಯ ಉತ್ಪಾದಿಸುವ ಕಲ್ಯಾಣ ಮಂಟಪಗಳು, ಹೋಟೆಲ್‌ಗಳು ಮತ್ತು ಅಪಾರ್ಟ್‌ಮೆಂಟ್ ಗಳು ತಮ್ಮ ಆವರಣದಲ್ಲಿಯೇ ಹಸಿ ತ್ಯಾಜ್ಯ ಸಂಸ್ಕರಣಾ ಘಟಕವನ್ನು ಅಳವಡಿಸಿಕೊಳ್ಳುವುದು ಕಡ್ಡಾಯಗೊಳಿಸಲಾಗಿದೆ ಎಂದರು.

ನಿರುಪಯುಕ್ತವಾಗಿರುವ ತಮ್ಮಲ್ಲಿ ಸಂಗ್ರಹವಿರುವ ಕಸವನ್ನು ರಸ್ತೆ, ಚರಂಡಿ ಅಥ-'ವಾ ಸಾರ್ವಜನಿಕ ಸ್ಥಳಗಳಲ್ಲಿ ಕಸ ಎಸೆಯುವುದು ಶಿಕ್ಷಾರ್ಹ ಅಪರಾಧವಾಗಿದೆ. ಅಲ್ಲದೇ ಪ್ಲಾಸ್ಟಿಕ್ ಅಥ-'ವಾ ಯಾವುದೇ ರೀತಿಯ ತ್ಯಾಜ್ಯವನ್ನು ಸುಡುವುದು ಪರಿಸರಕ್ಕೆ ಮಾರಕವಾಗಿದ್ದು, ಇದನ್ನು ಕಟ್ಟುನಿಟ್ಟಾಗಿ ನಿಷೇಧಿಸಿ ಸರ್ಕಾರ ಆದೇಶ ಹೊರಡಿಸಿದೆ ಉಲ್ಲಂಘಿ-ಸಿದವರ ಮೇಲೆ ಕಠಿಣ ಕಾನೂನು ಕ್ರಮ ಜರುಗಿಸಲು ಪಟ್ಟಣ ಪಂಚಾಯತಿಗೆ ಸರ್ಕಾರವು ಅವಕಾಶ ನೀಡಿದ್ದು ದಂಡ ಸಹಿತ ಶಿಕ್ಷಾರ್ಹ ಅಪರಾಧಕ್ಕೆ ಗುರಿಯಾಗುವಿರಿ ಎಂದು ಮುಖ್ಯಾಧಿಕಾರಿ ಗಡೇದ ಮಾಹಿತಿ ನೀಡಿದರು.

## ಎಚ್.ಡಿ.ಕೋಟೆಯಲ್ಲಿ ಸಂಭ್ರಮದ ಬಕ್ರೀದ್ ಹಬ್ಬ ಆಚರಣೆ

■ ಉದಯರಶ್ಮಿ ದಿನಪತ್ರಿಕೆ

ಎಚ್ ಡಿ ಕೋಟೆ: ಮುಸ್ಲಿಂ ಬಾಂಧವರ ಪವಿತ್ರ ಹಬ್ಬಗಳಲ್ಲಿ ಒಂದಾದ ತ್ಯಾಗ, ಬಲಿದಾನ ಸ್ಮರಿಸುವ ಬಕ್ರೀದ್ ಹಬ್ಬವನ್ನು ತಾಲೂಕಿನಾದ್ಯಂತ ಸಡಗರ ಸಂಭ್ರಮದಿಂದ ಆಚರಿಸಲಾಯಿತು. ತಾಲ್ಲೂಕಿನಾದ್ಯಂತ ಮುಸ್ಲಿಂ ಬಾಂಧವರು ಬಕ್ರೀದ್ ಹಬ್ಬವನ್ನು ಶ್ರದ್ಧಾ ಭಕ್ತಿಯಿಂದ ಆಚರಿಸಿ, ಹೊಸ ಉಡುಪುಗಳನ್ನು ಧರಿಸಿ ಆಯಾ ಗ್ರಾಮಗಳ ಈದ್ಗಾ ಮೈದಾನಗಳಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ಪಟ್ಟಣದ ಮುಸ್ಲಿಂ ಬ್ಲಾಕ್ ನಲ್ಲಿರುವ ಈದ್ಗಾ ಮೈದಾನದಲ್ಲೂ ಮುಸ್ಲಿಂ ಬಾಂಧವರು ಪ್ರಾರ್ಥನೆ ಸಲ್ಲಿಸಿ ಪರಸ್ಪರ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು.

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ತಾಲೂಕು ಯೂತ್ರುಅಧ್ಯಕ್ಷ ಶಫಿ ಕೋಟೆ ಮಾತನಾಡಿ, ಬಕ್ರೀದ್ ಹಬ್ಬವು ತ್ಯಾಗ ಮತ್ತು ಬಲಿದಾನದ ಪ್ರತೀಕ. ಬಡವರಿಗೆ, ನಿರ್ಗತಿಕರಿಗೆ ದಾನ, ಧರ್ಮ ಮಾಡಲು ಅವಕಾಶ ಮಾಡಿಕೊಡುವುದೇ ಬಕ್ರೀದ್ ಹಬ್ಬದ ವಿಶೇಷತೆ. ಎಲ್ಲರೂ ಕೂಡಿ ಸಹೋದರತೆ, ಸಮಾನತೆ ಹಾಗೂ ಸಹಬಾಳ್ವೆಯಿಂದ ಬದುಕು ನಡೆಸುವ, ಶಾಂತಿ ಸೌಹಾರ್ದತೆಯ ಪ್ರತೀಕವಾಗಿದೆ ಈ ಬಕ್ರೀದ್ ಹಬ್ಬ ಎಂದರು. ಮನುಕುಲಕ್ಕೆ ಶಾಂತಿ ನೀಡಲಿ, ಮಳೆಯಾಗಲಿ, ಬೆಳೆಯಾಗಲಿ. ಶಾಂತಿ ನೆಲೆಸಲಿ ಎಂದು ದೇವರಲ್ಲಿ ಪ್ರಾರ್ಥಿಸಿದ್ದೇವೆ. ಬೇರೆಯವರ ಬಗ್ಗೆ ಇರುವ ಕೆಡಕನ್ನು ನಾವೆಲ್ಲಾ ತ್ಯಾಗ ಮಾಡಬೇಕಾಗಿದೆ. ಬಕ್ರೀದ್ ಹಬ್ಬವು ಸಮಾಜದಲ್ಲಿ ಶಾಂತಿ, ಸಮೃದ್ಧಿ ನೆಲೆಸುವಂತೆ ಮಾಡಲಿ, ಎಲ್ಲರೂ ಕೂಡಿ ಬಾಳುವಂತಾಗಲಿ, ಉತ್ತಮ ಮಳೆ, ಬೆಳೆಯಾಗಿ ದೇಶ ಸಮೃದ್ಧಿಯಾಗಲಿ ಎಂದು ಆಶಿಸಿದರು.



ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ಈದ್ಗಾ ಮೈದಾನದ ಬಳಿ ಬಿಗಿ ಪೊಲೀಸ್ ಬಂದೋ ಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

### ಪ್ರಧಾನಿ ಮೋದಿ ಸರ್ಕಾರಕ್ಕೆ ಈ ಭಾಗದ ಜನರ ಪರವಾಗಿ ಸಂಸದ ರಮೇಶ ಜಿಗಜಿಣಗಿ ಅಭಿನಂದನೆ

## ಬೆಂಗಳೂರು- ಹುಬ್ಬಳ್ಳಿ-ಗದಗ ಬೈಪಾಸ್ ಶಾಶ್ವತ ರೈಲು ಸಂಚಾರಕ್ಕೆ ಅಸ್ತು

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಐತಿಹಾಸಿಕ ವಿಜಯಪುರ ಜಿಲ್ಲೆಯ ಜನರ ಬಹುದಿನದ ಬೇಡಿಕೆಯಾಗಿದ್ದ ಬೆಂಗಳೂರು- ಹುಬ್ಬಳ್ಳಿ-ಗದಗ ಬೈಪಾಸ್ ವಿಜಯಪುರ ಮಾರ್ಗವನ್ನು ಶಾಶ್ವತ ಮಾಡುವ ವಿಚಾರಕ್ಕೆ ಕೊನೆಗೂ ಗ್ರೀನ್ ಸಿಗ್ನಲ್ ಸಿಕ್ಕಿದೆ.

ಜನರ ಬಹುದಿನದ ಬೇಡಿಕೆಯನ್ನು ಆಧರಿಸಿ ಪ್ರಧಾನಿ ನರೇಂದ್ರ ಮೋದಿ ಹಾಗೂ ರೈಲ್ವೆ ಮಂತ್ರಿ ವಿ. ಸೋಮಣ್ಣ ಅವರಿಗೆ ಸತತವಾಗಿ ಪತ್ರ ವ್ಯವಹಾರ ನಡೆಸಲಾಗಿ-ತ್ತಲ್ಲದೇ ಖುದ್ದಾಗಿ ಭೇಟಿ ಮಾಡಿ ಮನವಿ ಸಲ್ಲಿಸಿದ ಫಲವಾಗಿ ಇದೀಗ ಕೇಂದ್ರ ಸರ್ಕಾರ ಒಲವು ತೋರಿದೆ.ಈ ಹಿಂದೆ ಕ್ರಿಸ್ ಮಸ್ ಸೇರಿದಂತೆ ಹಲವು ಹಬ್ಬದ ಸಂದರ್ಭದಲ್ಲಿ ಈ ಮಾರ್ಗದಲ್ಲಿ ಪ್ರಾಯೋಗಿಕ ವಾಗಿ ರೈಲು ಸೇವೆ ಆರಂಭಿಸಲಾಗಿತ್ತು. ಪರಿಣಾಮ ಜನರಿಂದ ವ್ಯಾಪಕವಾಗಿ ಸ್ಪಂದನೆ ವ್ಯಕ್ತವಾಯಿತಲ್ಲದೇ ಆಯಾಭಾಗದ ಸಂಸದರು, ರೈಲ್ವೆ ಮಂತ್ರಿ ಮತ್ತು ಪ್ರಧಾನಿ ಮೋದಿ ಸರ್ಕಾರದ ಕಾರ್ಯವನ್ನು ಕೊಂಡಾಡಿದ್ದರು. ಜನರ ಈ ನಾಡಿಮಿಡಿತ ಅರಿತು ಈ ಮಾರ್ಗವನ್ನು ಶಾಶ್ವತಗೊಳಿಸುವಂತೆ ದುಂಬಾಲು ಬಿದ್ದ ಫಲವಾಗಿ ರೈಲ್ವೆ ಮಂತ್ರಿಗಳು ವಿಶೇಷ ಕಾಳಜಿ ಮತ್ತು ಮುತುವರ್ಜಿ ವಹಿಸಿದ್ದಾರೆ.



ಬಾಗಲಕೋಟೆ ವಿಜಯಪುರದ ಎಲ್ಲ ರೈಲುಗಳನ್ನು ಈ ಬೈಪಾಸ್ ಮೂಲಕ ಓಡಿಸಿದರೆ, ಪ್ರಯಾಣದ ಸಮಯವನ್ನು 14 ರಿಂದ 10 ಗಂಟೆಗಳಿಗೆ ಇಳಿಸಬಹುದು. ಹೀಗಾಗಿ ಜನದಟ್ಟಣೆಯೂ ತಗ್ಗಲಿದೆ. ಪ್ರಯಾಣಿಕರು ಸಕಾಲಕ್ಕೆ ನಿಗದಿತ ಗಮ್ಯ ತಲುಪಲು ತುಂಬ ಸಹಕಾರಿಯಾಗಲಿದೆ. ಇಂಥ ಮಹತ್ತರ ಬೇಡಿಕೆ ಮನ್ನಿಸುತ್ತಿರುವ ಪ್ರಧಾನಿ ಮೋದಿ ಸರ್ಕಾರಕ್ಕೆ ಈ ಭಾಗದ ಜನರ ಪರವಾಗಿ ಅಭಿನಂದಿಸುವುದಾಗಿ ತಿಳಿಸಿರುವ ಸಂಸದ ರಮೇಶ ಜಿಗಜಿಣಗಿ ಅವರು ಶೀಘ್ರದಲ್ಲೇ ರೈಲು ಸೇವೆಗೆ ಹಸಿರು ನಿಶಾನೆ ತೋರುವುದಾಗಿ ತಿಳಿಸಿದ್ದಾರೆ.

## ಬಕ್ರೀದ್: ಮುಸ್ಲಿಂ ಸಮುದಾಯದಿಂದ ಸಾಮೂಹಿಕ ಪ್ರಾರ್ಥನೆ

■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ: ಇಸ್ಲಾಂ ಧರ್ಮೀಯರ ತ್ಯಾಗ, ಬಲಿದಾನದ ಪ್ರತೀಕವಾಗಿರುವ ಬಕ್ರೀದನ್ನು ಪಟ್ಟಣದ ಮುಸ್ಲಿಂ ಸಮುದಾಯದವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸುವುದರ ಮೂಲಕ ಶ್ರದ್ಧಾ, ಭಕ್ತಿಯಿಂದ ಅಚರಿಸಿದರು.

ಪಟ್ಟಣದ ಈದಗಾ ಮೈದಾನದಲ್ಲಿ ಬೆಳಿಗ್ಗೆ ಮಕ್ಕಳಾದಿಯಾಗಿ ಸಮಸ್ತ ಸಮುದಾಯದ ಜನ ಸೇರಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ನಂತರ ಮೌಲಾನಾ ಇಸ್ಮಾಯಿಲ್‌ಲಾಳಸಂಗಿಮಾತನಾಡಿ, ತ್ಯಾಗ, ಬಲಿದಾನದ ಸಂದೇಶ ಸಾರುವ ಹಬ್ಬದ ಆಚರಣೆ ಕೇವಲ ಒಂದು ದಿನಕ್ಕೆ ಸೀಮಿತವಾಗದೇ ದೈನಂದಿನ ಜೀವನದಲ್ಲಿ ಅಳವಡಿಸಿ ಕೊಳ್ಳುವಂತಾಬೇಕು. ಶಾಂತಿ ಸಂದೇಶ ಸಾರುವ ವಿಶ್ವ ಭಾತೃತ್ವದ ಸಂಕೇತವಾದ ಈ ದಿನದಂದು ನಾವೆಲ್ಲ ಮಾನವರು ಒಂದೇ ಭಾವನೆಯನ್ನು ಹೊಂದಿ ಮಾನವೀಯ ಮೌಲ್ಯಗಳನ್ನು ಸಾರೋಣ ಹಾಗೂ ಅಳವಡಿಸಿಕೊಳ್ಳೋಣ ಎಂದು ಕರೆ ನೀಡಿದರು. ನಂತರ ಪರಸ್ಪರ ಶುಭಾಶಯ ವಿನಿಮಯದಲ್ಲಿ ಪಾಲ್ಗೊಂಡು ಶುಭಕೋರಿದರು.



ಪ್ರಾರ್ಥನೆಯಲ್ಲಿ ಜೆಡಿ-ಎಸ್ ಜಿಲ್ಲಾ ಉಪಾಧ್ಯಕ್ಷ ರಿಯಾಜ್ ಯಲಗಾರ, ಅಂಜುಮನ್ ಇಸ್ಲಾಂ ಕಮೀಟಿಯ ಅಧ್ಯಕ್ಷರುಗಳಾದ ಮೈಬೂಬ್‌ಸಾಬ್ ಹುಂಡೇಕಾರ, ಲಾಲಸಾಬ್ ಮಳಖೇಡ (ಹೊಸನಗರ) ಉಪಾಧ್ಯಕ್ಷರುಗಳಾದ ರಫೀಕ ಪಾನಪರೋಷ್, ಉಸ್ಮಾನಸಾಬ್ ಹಚ್ಯಾಳ(ಹೊಸೂರ) ಕಾರ್ಯದರ್ಶಿ ಅಬ್ದುಲ್ ಸತಾರ್ ಉಪ್ಪರಘರ, ಪಟ್ಟಣ ಪಂಚಾಯಿತಿ ಸದಸ್ಯ ಬಷೀರ ಬೇಪಾರಿ, ರೆಹಮಾನ್‌ಸಾಬ್ ವಡ್ಡೋಡಗಿ, ಎ.ಡಿ.ಮುಲ್ಲಾ, ಶಬ್ಬೀರ ಮುಲ್ಲಾ, ಹಾಜೀಲಾಲ್ ಮಸಳಿ, ಮುನೀರ್ ಅಹ್ಮದ್ ಮಳಖೇಡ, ರಿಯಾಜ್ ನಾಯ್ಕೋಡಿ, ನಜೀರ್ ಕಲಕೇರಿ, ಮುರ್ತುಜಾ ತಾಂಬೋಳಿ ಸೇ-ರಿದಂತೆ ಸಮಸ್ತ ಸಮುದಾಯದ ಜನರು ಭಾಗವಹಿಸಿದ್ದರು.

# ಶಾಲೆಗಳಲ್ಲಿ ಶಿಕ್ಷಣ ಜೊತೆಗೆ ಕಲಿಸಬಹುದಾದ ಕೌಶಲ್ಯಗಳು

ಭಾವರಶ್ಮಿ

■ ಉದಯರಶ್ಮಿ ದಿನಪತ್ರಿಕೆ

ಭಾರತೀಯ ಶಾಲೆಗಳು ತಮ್ಮ ಕಠಿಣ ಶೈಕ್ಷಣಿಕ ಮತ್ತು ಪರೀಕ್ಷಾ–ಆಧಾರಿತ ಸಂಸ್ಕೃತಿಗೆ ಹೆಸರುವಾಸಿಯಾಗಿವೆ. ಆದರೆ ಈ ವ್ಯವಸ್ಥೆಯು ಯುವ ಸಮಾಜವನ್ನು ನೈಜ ಜಗತ್ತಿಗೆ ಸಿದ್ಧಪಡಿಸುವಲ್ಲಿ ಸಫಲವಾಗುತ್ತಿದೆಯೆ?

ಗಮನಿಸಿ ನೋಡಿದರೆ ಗಣಿತದ ಸಮಸ್ಯೆಯನ್ನು ಯುವಕರು ಬಗೆಹರಿಸಬಹುದು ಅಥವಾ ನಿಭಾಯಿಸಬಹುದು ಅಥವಾ ಐತಿಹಾಸಿಕ ದಿನಾಂಕಗಳನ್ನು ಪಠಿಸಲೂಬಹುದು, ಆದರೆ ತರಗತಿಯ ಆಚೆಗಿನ ಜೀವನದ ಬಗ್ಗೆ, ಜೀವನ ಕೌಶಲ್ಯದ ಬಗ್ಗೆ ಭಾರತೀಯ ಶಾಲೆಗಳು ಕಲಿಸಬೇಕಾದ ತೀರಾ ಅಗತ್ಯವಿರುವ ನಿರ್ಣಾಯಕ ಕೌಶಲ್ಯಗಳ ನೋಟ ಇಲ್ಲಿದೆ.



**1. ಮಾನಸಿಕ ಆರೋಗ್ಯ ಮತ್ತು ಭಾವನಾತ್ಮಕ ಯೋಗಕ್ಷೇಮ**

ಮಾನಸಿಕಆರೋಗ್ಯದಬಗ್ಗೆಹೆಚ್ಚುತ್ತಿರುವಸಂಭಾಷಣೆಯಹೊರತಾಗಿಯೂ, ಭಾರತೀಯ ಶಾಲೆಗಳು ಹೆಚ್ಚಾಗಿ ಅದನ್ನು ನಿಷಿದ್ಧವೆಂದು ಪರಿಗಣಿಸುತ್ತವೆ. ಶೈಕ್ಷಣಿಕ ಒತ್ತಡವು ಸಾರ್ವಕಾಲಿಕ ಉತ್ತುಂಗದಲ್ಲಿದ್ದರೂ ಸಹ, ಒತ್ತಡ, ಆತಂಕ ಮತ್ತು ಭಾವನೆಗಳನ್ನು ಹೇಗೆ ನಿರ್ವಹಿಸುವುದು, ಒತ್ತಡವನ್ನು ಗುರುತಿಸುವುದು ಮತ್ತು ಅದರಿಂದ ಹೊರಬರಲು ಸಹಾಯವನ್ನು ಪಡೆಯುವುದರ ಬಗ್ಗೆ ವಿದ್ಯಾರ್ಥಿಗಳಿಗೆ ಕಲಿಸುವುದು ಆದ್ಯತೆಯಾಗಿರಬೇಕಾಗಿದೆ.

ತಂದೆ–ತಾಯಿ, ಅಜ್ಜ–ಅಜ್ಜಿ, ಅಣ್ಣ–ತಮ್ಮ, ಅಕ್ಕ–ತಂಗಿ ಇತ್ಯಾದಿ ಸಂಬಂಧಗಳ ಮಹತ್ವ ಮತ್ತು ಸಂಬಂಧಗಳ ಅವಶ್ಯಕತೆ ಬಗ್ಗೆ ಕಲಿಸಬೇಕಾಗಿದೆ.

**2. ಆರ್ಥಿಕ ಸಾಕ್ಷರತೆ ಬಗ್ಗೆ ಯಾವುದಾದರೂ ಶಿಕ್ಷಣ ನೀಡುತ್ತಿದ್ದೇವೆಯೆ?**

ಉತ್ತರ ಬಹುತೇಕ ಯಾವುದೂ ಇಲ್ಲ. ಆಧುನಿಕ ಭಾರತೀಯ ಶಾಲೆಗಳು ಸಿದ್ಧಾಂತದ ಮೇಲೆ ಕೇಂದ್ರೀಕರಿಸುತ್ತಿದೆಯೋ ಏನೋ ಆದರೆ ಆರ್ಥಿಕ ಸಾಕ್ಷರತೆ – ಪ್ರತಿಯೊಬ್ಬ ವಯಸ್ಕರಿಗೂ ಅಗತ್ಯವಿರುವ ಕೌಶಲ್ಯ ಹಣವನ್ನು ಹೇಗೆ ನಿರ್ವಹಿಸುವುದು ಎಂಬುದನ್ನು ಶಾಲಾ ಕಾಲೇಜು ಹಂತದಲ್ಲಿ ಕಲಿಯುವುದರಿಂದ ನಂತರದ ಜೀವನದಲ್ಲಿ ದುಬಾರಿ ತಪ್ಪುಗಳಿಂದ ವಿದ್ಯಾರ್ಥಿಗಳನ್ನು ರಕ್ಷಿಸಬಹುದು.

**3. ಸ್ವಯಂ ರಕ್ಷಣೆ/ ಆತ್ಮ ರಕ್ಷಣಾ ತಂತ್ರಗಳು**



ವಿದ್ಯಾರ್ಥಿಗಳಿಗೆ ಆರೋಗ್ಯಕರ ಸಂಬಂಧಗಳು ಮತ್ತು ಗಡಿಗಳನ್ನು ಅರ್ಥಮಾಡಿಕೊಳ್ಳುವ ಪೀಳಿಗೆಯನ್ನು ನಿರ್ಮಿಸಲು ಸಮಗ್ರ, ವಾಸ್ತವಿಕ ಮತ್ತು ಕಳಂಕ–ಮುಕ್ತ ಲೈಂಗಿಕ ಶಿಕ್ಷಣ ಹಾಗೂ ಅತ್ಮ ರಕ್ಷಣಾ ತಂತ್ರಗಳು ಅತ್ಯಗತ್ಯ

ಮಕ್ಕಳಿಗೆ ಸುರಕ್ಷಿತ/ಅಸುರಕ್ಷಿತ ಸ್ಪರ್ಶದ ಅರಿವನ್ನು ಕೊಡಲೇಬೇಕು.

ಅದರಿಂದಾದರೂ ಲೈಂಗಿಕ ದೌರ್ಜನ್ಯ, ಮಕ್ಕಳ ಮಾರಾಟ ಪ್ರಕರಣಗಳ ಸಂಖ್ಯೆ ಕಡಿಮೆ ಆಗಬಹುದೇನೋ?

**4. ಮೌಖಿಕ ಕಲಿಕೆಗಿಂತ ವಿಮರ್ಶಾತ್ಮಕ ಚಿಂತನೆ**

ಆಧುನಿಕ ಶಾಲೆಗಳು ವಿಶ್ಲೇಷಣಾತ್ಮಕ ಕೌಶಲ್ಯಗಳಿಗಿಂತ ಮೌಖಿಕ ಕಂಠಪಾಠಕ್ಕೆ ಆದ್ಯತೆ ನೀಡುತ್ತಿವೆ. ಆದರೆ ನಾವೀನ್ಯತೆಯನ್ನು ಮೌಲ್ಯೀಕರಿಸುವ ಜಗತ್ತಿನಲ್ಲಿ, ವಿದ್ಯಾರ್ಥಿಗಳು ವಿಮರ್ಶಾತ್ಮಕವಾಗಿ ಯೋಚಿಸುವುದು, ಸಮಸ್ಯೆಗಳನ್ನು ಸೃಜನಾತ್ಮಕವಾಗಿ ಪರಿಹರಿಸುವುದು ಮತ್ತು ಅವರಿಗೆ ಹೇಳಿರುವುದನ್ನು/ ಅರ್ಥೈಸಿಕೊಳ್ಳಲು ಹೇಗೆ ಪ್ರಶ್ನಿಸುವುದು? ಎಂಬುದನ್ನು ಕಲಿಯುವಲ್ಲಿ ವಿಫಲರಾಗಿರುವರೆನೊ ಎಂಬ ಚಿಂತನೆಯು ಅವಶ್ಯಕವಾಗಿದೆ. ಉತ್ತರಗಳನ್ನು ಕಂಠಪಾಠ ಮಾಡುವುದು ವಿದ್ಯಾರ್ಥಿಗಳಿಗೆ ಅಂಕಗಳನ್ನು ಪಡೆಯಲು ಸಹಾಯವಾಗಬಹುದು, ಆದರೆ ಪ್ರಶ್ನೆಗಳನ್ನು ಕೇಳುವುದು ಅವರನ್ನು ಮುಂದಾಲೋಚನೆಗೆ ಕೊಂಡೊಯ್ಯುತ್ತದೆ.

**5. ಸಂವಹನ ಮತ್ತು ಸಾರ್ವಜನಿಕ ಭಾಷಣ**

ಭಾರತೀಯ ವಿದ್ಯಾರ್ಥಿಗಳು ಸೈದ್ಧಾಂತಿಕ ಜ್ಞಾನದಲ್ಲಿ ಶ್ರೇಷ್ಠರು, ಆದರೆ ಅನೇಕರು ತಮ್ಮ ಆಲೋಚನೆಗಳನ್ನು ಆತ್ಮವಿಶ್ವಾಸದಿಂದ ವ್ಯಕ್ತಪಡಿಸುವಲ್ಲಿ ಹೆಣಗಾಡುತ್ತಾರೆ. ಇಂದಿನ ಜಾಗತೀಕೃತ ಜಗತ್ತಿನಲ್ಲಿ ಸಾರ್ವಜನಿಕ ಭಾಷಣ ಮತ್ತು ಚರ್ಚೆ ಸೇರಿದಂತೆ ಸಂವಹನ ಕೌಶಲ್ಯಗಳು ಅತ್ಯಗತ್ಯ. ಆದರೂ ಇವುಗಳನ್ನು ತರಗತಿಗಳಲ್ಲಿ ವಿರಳವಾಗಿ ಹೇಳಲಾಗುತ್ತದೆ, ವಿದ್ಯಾರ್ಥಿಗಳು ಸಂದರ್ಶನಗಳು, ಪ್ರಸ್ತುತಿಗಳು ಮತ್ತು ನಾಯಕತ್ವ ಪಾತ್ರಗಳಿಗೆ ಸಿದ್ಧರಿಲ್ಲದಂತೆ ಬಿಡುತ್ತಾರೆ.



" ಬೆಳೆಯುವ ಸಸಿ ಮೊಳಕೆಯಲ್ಲಿ ",

ಎಂಬಂತೆ ಪ್ರಾಥಮಿಕ ಹಂತದಿಂದಲೇ ಅವರನ್ನು ಈ ಎಲ್ಲಾ ಕೌಶಲ್ಯ ಅಭಿವೃದ್ಧಿ ಹೊಂದಲು ಮಾಡುವಂತಹ ಶಿಕ್ಷಣ ನೀಡಬೇಕು.

*6. ಉದ್ಯಮಶೀಲತೆ ಮತ್ತು ಅಪಾಯ–ತೆಗೆದುಕೊಳ್ಳುವಿಕೆ*ನವೋದ್ಯಮಗಳು ಮತ್ತು ನಾವೀನ್ಯತೆಗಳಿಂದ ತುಂಬಿರುವ ದೇಶದಲ್ಲಿ, ಶಾಲೆಗಳಲ್ಲಿ ಉದ್ಯಮಶೀಲತೆಯನ್ನು ಇನ್ನೂ ನಂತರದ ಚಿಂತನೆಯಾಗಿ ಪರಿಗಣಿಸಲಾಗುತ್ತದೆ. ಹದಿಹರೆಯದವರಿಗೆ ಉದ್ಯಮಶೀಲವಾಗಿ ಯೋಚಿಸುವುದು, ಅಪಾಯಗಳನ್ನು ನಿರ್ವಹಿಸುವುದು ಮತ್ತು ವೈಫಲ್ಯವನ್ನು ಹೇಗೆ ಅಳವಡಿಸಿಕೊಳ್ಳುವುದು ಎಂಬುದನ್ನು ಕಲಿಸುವುದು

ಹಾಗೂ ಉದ್ಯೋಗಾಕಾಂಕ್ಷಿಗಳಿಗಿಂತ ಹೆಚ್ಚಿನ ಉದ್ಯೋಗ ಸೃಷ್ಟಿಕರ್ತರನ್ನು ರಚಿಸಲು ಸಹಾಯ ಮಾಡುತ್ತದೆ.

**7. ಸಾಂಸ್ಕೃತಿಕ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವುದು**



ಜಾತಿ ತಾರತಮ್ಯದಿಂದ ಲಿಂಗ ಅಸಮಾನತೆಯವರೆಗೆ, ಭಾರತೀಯ ಸಮಾಜವು ವಿಶಿಷ್ಟ ಸವಾಲುಗಳನ್ನು ಎದುರಿಸುತ್ತಿದೆ. ಶಾಲೆಗಳು ಈ ಸಮಸ್ಯೆಗಳನ್ನುವಿಮರ್ಶಾತ್ಮಕವಾಗಿಚರ್ಚಿಸಲುಮತ್ತುಅರ್ಥಮಾಡಿಕೊಳ್ಳಲು ಅಥವಾ ಸಾಮಾಜಿಕವಾಗಿ ವಾಸ್ತವಗಳ ಬಗ್ಗೆ ಮುಕ್ತ ಸಂಭಾಷಣೆಗಳನ್ನು ಪ್ರೋತ್ಸಾಹಿಸುವುದರಿಂದ ಹೆಚ್ಚು ಸಹಾನುಭೂತಿಯುಳ್ಳ ಮತ್ತು ಮಾಹಿತಿಯುಕ್ತ ಪೀಳಿಗೆಯನ್ನು ನಿರ್ಮಿಸಬಹುದು.

**ಶಾಲೆಗಳು ಭೂತಕಾಲದಲ್ಲಿ ಏಕೆ ಸಿಲುಕಿಕೊಂಡಿವೆ?**

ಭಾರತೀಯ ಶಾಲೆಗಳು ಸಾಮಾನ್ಯವಾಗಿ ಸಂಪ್ರದಾಯವಾದಿ ಸಮುದಾಯಗಳಿಂದ ವಿವಾದ ಅಥವಾ ಹಿನ್ನಡೆಯನ್ನು ತಪ್ಪಿಸಲು "ಸುರಕ್ಷಿತ" ವಿಷಯಗಳಿಗೆ ಆದ್ಯತೆ ನೀಡುತ್ತವೆ. ಆದರೆ ಈ ವಿಷಯಗಳನ್ನು ತಪ್ಪಿಸುವುದು ವಿದ್ಯಾರ್ಥಿಗಳಿಗೆ ಸಹಾಯ ಮಾಡುವುದಿಲ್ಲ – ಅದು ಅವರನ್ನು ಜೀವನಕ್ಕೆ ಸಿದ್ಧರಾಗಲು ಬಿಡುವುದಿಲ್ಲ.

ನಾವು ಏನು ಮಾಡಬಹುದು?



ಶಾಲೆಗಳು ರಾತ್ರೋರಾತ್ರಿ ಬದಲಾಗದಿದ್ದರೂ, ಹದಿಹರೆಯದ ವಿಷಯವಸ್ತು : ಶಿಕ್ಷಣದಲ್ಲಿ ಕಲಿಕೆ ಮತ್ತು ಜೀವನ ಕೌಶಲ್ಯದ ನಡುವೆ ಅಂತರವನ್ನು ಕಡಿಮೆ ಮಾಡಬೇಕು.

ನಾಯಕತ್ವ ಕೌಶಲ್ಯಗಳು: ಸದಾ ಮುನ್ನಡೆಸುವುದು ಮತ್ತು ಸಹಯೋಗಿಸುವುದು ಹೇಗೆ ಎಂದು ತಿಳಿಸಬೇಕು.

ಜಾಗತಿಕ ಮಾನ್ಯತೆ:

ತಜ್ಞರು ಪ್ರಪಂಚದಾದ್ಯಂತದ ಹದಿಹರೆಯದವರೊಂದಿಗೆ ತೊಡಗಿಸಿಕೊಂಡು ಪಠ್ಯಪುಸ್ತಕಗಳನ್ನು ಮೀರಿದ ವಿಚಾರಗಳನ್ನು ಅನ್ವೇಷಿಸಿ, ಜೀವನದ ಪಾಠ, ಮಾನಸಿಕ ಆರೋಗ್ಯದಿಂದ ಹಿಡಿದು ಲಿಂಗ ಸಮಾನತೆಯವರೆಗೆ ಮುಖ್ಯವಾದ ವಿಚಾರಗಳ ಬಗೆಗಿನ ಶಿಕ್ಷಣದ ಜವಾಬ್ದಾರಿಯನ್ನು

ಶಾಲೆಗಳು ಕಲಿಸಲು ಹಾಗೂ ಅನುಭವಗಳನ್ನು ಹುಡುಕಿ, ವ್ಯಾಪಕವಾಗಿ ಓದಿ ತಿಳಿಯುವ ಪಠ್ಯಕ್ರಮವನ್ನು ಮೀರಿ ಕಲಿಯುವ ವಿದ್ಯಾರ್ಥಿಗಳನ್ನು ಪ್ರೇರೇಪಿಸುವ ಶಾಲೆಗಳು ಆಧುನಿಕ ಜಗತ್ತಿಗೆ ಬೇಕಾಗಿದೆ.

ಶಾಲೆಗಳು ಯುವ ಸಮೂಹವನ್ನು ಪರೀಕ್ಷೆಗೆ ಸಿದ್ಧಪಡಿಸಬಹುದಾದರೂ, ಜೀವನವು ಶ್ರೇಣಿಗಳಿಗಿಂತ ಹೆಚ್ಚಿನದನ್ನು ಬಯಸುತ್ತದೆ – ಅದಕ್ಕೆ ಶಾಲಾ ಕಾಲೇಜುಗಳು ಧೈರ್ಯ, ಕುತೂಹಲ ಮತ್ತು ಆತ್ಮವಿಶ್ವಾಸ, ಆತ್ಮಸ್ಥೈರ್ಯ ತುಂಬುವ ಮಂದಿರವಾಗಬೇಕು.

ಲೇಖನ
ಸುಮ ಬಸವರಾಜ ಚೌಧರಿ
ಸದಸ್ಯರು
ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ
ವಿಜಯಪುರ



# ಬಂಡಯ್ಯ ಶಾಸ್ತ್ರಿಗೆ ವರ ಕವಿ ರತ್ನ ಪ್ರಶಸ್ತಿ



ಕಲಬುರಗಿ,: ನಗರದ ರಂಗಮಂದಿರದಲ್ಲಿ ಅವರಳ್ಳಿಯ ಸಂಗೀತ ರಸ ಋಷಿ ಪಂಡಿತ ಪುಟ್ಟರಾಜ ಗವಾಯಿ ಸಮಗ್ರ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಪಂಡಿತ ಪಂಚಾಕ್ಷರಿ ಗವಾಯಿಗಳವರ ಹಾಗೂ ಪಂ.ಪುಟ್ಟರಾಜ ಗವಾಯಿಗಳ ಪುಣ್ಯ ಸ್ಮರಣೋತ್ಸವದ ಅಂಗವಾಗಿ ಜರುಗಿದ ಸಂಗೀತೋತ್ಸವ ಹಾಗೂ ಸಂಸ್ಕೃತಿಕ ಕಾರ್ಯಕ್ರಮದಲ್ಲಿ ಕಲ್ಯಾಣ ನಾಡಿನ ಕಲಾವಿದ, ಯುವ ಸಾಹಿತಿ ಬಂಡಯ್ಯ ಶಾಸ್ತ್ರಿ ಅವರಿಗೆ ವರ ಕವಿ ರತ್ನ ಪ್ರಶಸ್ತಿ ಪ್ರಧಾನ ಮಾಡಲಾಯಿತು.

ಕಾರ್ಯಕ್ರಮದ ಸಾನಿಧ್ಯವನ್ನು ಶ್ರೀಶೈಲ ಜಗದ್ಗುರುಗಳು, ವಿ.ಕೆ.ಸಲಗರದ ಪೂಜ್ಯರು, ಭರತನೂರಿನ ಪೂಜ್ಯರು, ಕರಜಗಿ ಪೂಜ್ಯರು, ಕಾಂಗ್ರೆಸ್ ಮುಖಂಡ ನೀಲಕಂತರಾವ ಮೂಲಗೆ, ಟ್ರಸ್ಟ್ ಅಧ್ಯಕ್ಷ ಸಿದ್ಧಾರೂಢ ಅವರಳ್ಳಿ, ಚೆಂಗಟೆ ಪರಿವಾದವರು ಹಾಗೂ ನಾಡಿನ ಅನೇಕ ಕವಿ, ಕಲಾವಿದರು, ಸಾಹಿತಿಗಳು, ಕಲಾಭಿಮಾನಿಗಳು ಕಾರ್ಯಕ್ರಮದಲ್ಲಿ ಭಾಗಿಯಾಗಿದರು.

# ಹೇಮನೂರ ದಂಪತಿಗಳಿಗೆ ಸನ್ಮಾನ



ಕಲಬುರಗಿ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಆಯೋಜಿಸಿರುವ ಜಿಲ್ಲಾ ಪ್ರಥಮ ಕವಿಸಮ್ಮೇಳನ ಅಧಕ್ಷರಾದ ನರಸಿಂಗರಾವ ಹೇಮನೂರ ದಂಪತಿಗಳಿಗೆ ವಿಶ್ವ ಕರ್ಮ ಸಮಾಜ ಮಾಡಿಯಾಳಕರ ಬಂಧುಗಳಿಂದ ರವಿವಾರ ವಿಶೇಷ ಸನ್ಮಾನ ಜರುಗಿತು.

ಮಾಡಿಯಾಳಕರ ಮನೆತನದ ಹಿರಿಯ ಮಲ್ಲಣ್ಣ ನಿ.ಪೊದ್ದಾರ ಹಾಗೂ ವಿಶ್ವಕರ್ಮ ಸಮಾಜದ ಪ್ರಧಾನ ಕಾರ್ಯದರ್ಶಿ ದಶರಥ ಮ.ಪೊದ್ದಾರ,ರಾಜಶೇಯ ನಿ.ಪೊದ್ದಾರ ಅವರ ನೇತೃತ್ವದಲ್ಲಿ ಸನ್ಮಾನ ಸಮಾರಂಭ ನೆರವೇರಿಸಲಾಯಿತು.

ಮಾಡಿಯಾಳದ ಅಶೋಕ ಗು.ಪೊದ್ದಾರ, ಶ್ರೀಕಾಂತ ಪೊದ್ದಾರ, ವಿಶ್ವನಾಥ ಪೊದ್ದಾರ, ಕೃಷ್ಣ ಪೊದ್ದಾರ,ನವೀನ ಪೊದ್ದಾರ, ಅಳಿಯರಾದ ಶಶಿಕಲಾ ಪ್ರಭಾಕರ ಸೋನಾರ್, ಗಂಗಾಬಾಯಿ ದೇವೇಂದ್ರ ಪತ್ತಾರ,ಸುನೀತಾ ರವಿ ಪತ್ತಾರ,–ಜಯಶ್ರೀ ರಾಜಶೇಖರ ನಿಂಬಾಳಕರ,ಅನಿತಾ ಪತ್ತಾರ ಸುರಪುರ. ಹೇಮನೂರ ಕುಟುಂಬದ ಜನಾರ್ದನರಾವ ಹೇಮನೂರ, ಶುಭಾಶ್ರೀ ಸುರೇಶ ಪತ್ತಾರ ಯಡ್ರಾಮಿ ಮುಂತಾದವರು ಉಪಸ್ಥಿತರಿದ್ದರು.

# ಸಚಿವ ಖಂಡ್ರೆ ಡಿಸಿಎಂ ಆಗಲಿ: ಚವದಾಪುರಿ ಶ್ರೀ

ಕಲಬುರಗಿ,: ರಾಜ್ಯ ಸಚಿವ ಸಂಪುಟದ ಅರಣ್ಯ, ಪರಿಸರ ಮತ್ತು ಜೀವ ವಿಜ್ಞಾನ ಖಾತೆ ಸಚಿವ ಹಾಗೂ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ಈಶ್ವರ ಖಂಡ್ರೆ ಅವರನ್ನು ರಾಜ್ಯದ ಉಪಮುಖ್ಯಮಂತ್ರಿಗಳನ್ನಾಗಿ ಮಾಡಬೇಕೆಂದು ಕಲಬುರಗಿ ಚವದಾಪುರಿ ಹಿರೇಮಠದ ಡಾ.ರಾಜಶೇಖರ ಶಿವಾಚಾರ್ಯರು ಸಲಹೆ ನೀಡಿದ್ದಾರೆ.



ಈ ಕುರಿತು ಪತ್ರಿಕಾ ಹೇಳಿಕೆ ಬಿಡುಗಡೆಗೊಳಿಸಿರುವ ಅವರು, ರಾಜ್ಯದಲ್ಲಿ ವೀರಶೈವ–ಲಿಂಗಾಯತ ಸಮುದಾಯವನ್ನು ಮುನ್ನಡೆಸುತ್ತಿರುವ ಪ್ರಮುಖ ನಾಯಕರಾಗಿ ಗುರುತಿಸಿಕೊಂಡಿರುವುದಷ್ಟೇ ಅಲ್ಲ; ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಅಧಿಕಾರ ಲಭಿಸುವಲ್ಲಿ ಈ ಸಮುದಾಯ ಒಗ್ಗಟ್ಟು ಪ್ರದರ್ಶಿಸುವಲ್ಲಿ ಈಶ್ವರ ಖಂಡ್ರೆಯವರು ತೋರಿದ ಮುತುವರ್ಜಿಯನ್ನು ಪ್ರಧಾನವಾಗಿ ಗಮನದಲ್ಲಿಟ್ಟುಕೊಂಡು ಅವರಿಗೆ ಉಪಮುಖ್ಯಮಂತ್ರಿ ಹುದ್ದೆ ನೀಡಬೇಕೆಂದು ಶ್ರೀಗಳು ಒತ್ತಾಯಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಚಿವ ಸಂಪುಟದಲ್ಲಿ ಅರಣ್ಯ, ಪರಿಸರ ಮತ್ತು ಜೀವ ವಿಜ್ಞಾನ ಖಾತೆಯನ್ನು ಖಂಡ್ರೆ ಅತ್ಯಂತ ಸಮರ್ಥವಾಗಿ ನಿಭಾಯಿಸಿದ್ದಾರೆ. ಹಾಗಾಗಿ, ರಾಜ್ಯದ ಆಡಳಿತ ಚುಕ್ಕಾಣಿ ಹಿಡಿಯಲಿರುವ ಡಿ.ಕೆ.ಶಿವಕುಮಾರ ಅವರು ತಮ್ಮ ಸಂಪುಟದಲ್ಲಿ ಈಶ್ವರ ಖಂಡ್ರೆಯವರಿಗೆ ಉಪಮುಖ್ಯಮಂತ್ರಿ ಹುದ್ದೆ ನೀಡಬೇಕೆಂದು ಚವದಾಪುರಿ ಶ್ರೀಗಳು ಕಿವಿಮಾತು ಹೇಳಿದ್ದಾರೆ.

# ಆಟೋ, 8250 ರೂ.ಮೌಲ್ಯದ ಅಕ್ಕಿ ವಶ

ಕಲಬುರಗಿ:ನಗರದಬಸವನಗರಧರ್ಮಶಾಲಾಎದುರುಗಡೆಯ ರಸ್ತೆಯ ಮೇಲೆ ಆಟೋದಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಅಕ್ಕಿಯನ್ನು ಅಕ್ರಮವಾಗಿ ಸಂಗ್ರಹಿಸಿ ಕಾಳಸಂತೆಯಲ್ಲಿ ಮಾರಾಟ ಮಾಡಲು ಸಾಗಾಣಿಕೆ ಮಾಡಲಾಗುತ್ತಿದೆ ಎಂಬ ಮಾಹಿತಿ ಮೇಲೆ ಫುಡ್ ಇನ್ಸಪೆಕ್ಟರ್ ಯಲ್ಲಾಲಿಂಗ ಕಡಕೊಳಕರ್, ಅಶೋಕನಗರ ಪೊಲೀಸ್ ಠಾಣೆ ಇನ್ಸಪೆಕ್ಟರ್ ಸತೀಶ ಎನ್.ಕಣೀಮೇಶ್ವರ ಅವರು ದಾಳಿ ನಡೆಸಿ ಫಿಲ್ಟಬೆಡ್ ರಾಜೀವಗಾಂಧಿ ನಗರದ ರಾಹುಲ್ ತಂದೆ ಶ್ರೀಮಂತ ವಾಲಿಕಾರ (23) ವಶಕ್ಕೆ ಪಡೆದು 1 ಲಕ್ಷ ರೂ.ಮೌಲ್ಯದ ಆಟೋ ಮತ್ತು 45 ರಿಂದ 50 ಕೆ.ಜಿ.ತೂಕದ, 8250 ರೂ.ಮೌಲ್ಯದ 2.5 ಕ್ವಿಂಟಾಲ್ ಅಕ್ಕಿ ಜಪ್ತಿ ಮಾಡಿದ್ದಾರೆ. ಆಟೋ ಚಾಲಕ ರಾಹುಲ್ ವಾಲಿಕಾರ ವಿರುದ್ಧ ಅಶೋಕ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

# ವೈಜ್ಞಾನಿಕ ಚಿಂತನೆ ಅಗತ್ಯ : ಪ್ರೊ.ವಾಮನ ಗಾಜ್ರೆ



ಕಲಬುರಗಿ: ನಗರದ ನೂತನ ವಿದ್ಯಾಲಯ ಪದವಿ ಮಹಾವಿದ್ಯಾಲಯದ ರಸಾಯನಶಾಸ್ತ್ರ ವಿಭಾಗ ಹಾಗೂ ಐಕ್ಯೂಎಸಿ ಸಹಯೋಗದೊಂದಿಗೆ ಶನಿವಾರ ವಿಜ್ಞಾನ ಮೇಳವನ್ನು ಆಯೋಜಿಸಲಾಗಿತ್ತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಸೇಡಂ ಸರಕಾರಿ ಮಹಾವಿದ್ಯಾಲಯದ ಪ್ರಾಧ್ಯಾಪಕ ಪ್ರೊ. ವಾಮನ ಗಾಜ್ರೆ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ, ಇಂದಿನ ತಂತ್ರಜ್ಞಾನಾಧಾರಿತ ಯುಗದಲ್ಲಿ ಕೇವಲ ಭಾವನಾತ್ಮಕ ಬದುಕಿಗಿಂತ ಪ್ರಾಯೋಗಿಕ ಹಾಗೂ ವೈಚಾರಿಕ ಬದುಕು ಅಗತ್ಯವಾಗಿದ್ದು, ವೈಜ್ಞಾನಿಕ ಚಿಂತನೆ ವ್ಯಕ್ತಿಯ ತಾರ್ಕಿಕ ಸಾಮರ್ಥ್ಯವನ್ನು ವೃದ್ಧಿಸುತ್ತದೆ ಎಂದು ಹೇಳಿದರು.

ವಿದ್ಯಾರ್ಥಿಗಳು ಪ್ರಯೋಗಾತ್ಮಕ ಅಧ್ಯಯನ, ಸಂಶೋಧನಾ ಮನೋವೃತ್ತಿ ಹಾಗೂ ನವೀನ ಆವಿಷ್ಕಾರಗಳತ್ತ ಆಸಕ್ತಿ ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು. ಗೌರವ ಉಪಸ್ಥಿತರಾಗಿ ಮಾತನಾಡಿದ ಮಹಾವಿದ್ಯಾಲಯದ ನಿವೃತ್ತ ಪ್ರಾಚಾರ್ಯರ ಪ್ರೊ. ಯು.ಜಿ. ಸರದೇಶಪಾಂಡೆ ಅವರು ಗೃಹ ವಿಜ್ಞಾನ, ಪೌಷ್ಟಿಕಾಂಶ, ಆಹಾರ ಸಂರಕ್ಷಣೆ ಮತ್ತು ಆರೋಗ್ಯ ವಿಜ್ಞಾನಗಳ ಪ್ರಸ್ತುತತೆಯನ್ನು ವಿವರಿಸಿದರು. ಮಹಾವಿದ್ಯಾಲಯದ ನಿರ್ದೇಶಕ ಪ್ರೊ. ಗೋವಿಂದ ಪೂಜಾರ್ ಅಧ್ಯಕ್ಷತೆ ವಹಿಸಿದ್ದರು.


ವಿಜ್ಞಾನ ಮೇಳದಲ್ಲಿ ಸುಮಾರು 20 ವಿದ್ಯಾರ್ಥಿಗಳು ವಿವಿಧ ವೈಜ್ಞಾನಿಕ ಮಾದರಿಗಳು, ರಾಸಾಯನಿಕ ಪ್ರತಿಕ್ರಿಯೆಗಳು, ಶಕ್ತಿ ಪರಿವರ್ತನೆ, ಪರಿಸರ ಸಂರಕ್ಷಣೆ, ಜಲಶುದ್ಧೀಕರಣ ಸೇರಿದಂತೆ ಹಲವು ವಿಷಯಾಧಾರಿತ ಪ್ರಯೋಗಗಳನ್ನು ಪ್ರದರ್ಶಿಸಿದರು.

ನೂತನ ವಿದ್ಯಾಲಯ ಸಂಸ್ಥೆಯ ಅಧ್ಯಕ್ಷ ಡಾ.ಗೌತಮ್ ಜಹಗೀರದಾರ ಹಾಗೂ ಸಂಸ್ಥೆಯ ಸದಸ್ಯರು ಮೇಳಕ್ಕೆ ಭೇಟಿ ನೀಡಿ ವಿದ್ಯಾರ್ಥಿಗಳ ವೈಜ್ಞಾನಿಕ ಮಾದರಿಗಳು ಮತ್ತು ಪ್ರಯೋಗಗಳನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಜಾಗೃತಿ ಹಾಗೂ ನವೋದ್ಯಮಶೀಲತೆ ಬೆಳೆಸಲು ಇಂತಹ ಕಾರ್ಯಕ್ರಮಗಳು ಸಹಕಾರಿಯಾಗುತ್ತವೆ ಎಂದು ಅಭಿಪ್ರಾಯಪಟ್ಟರು. ಮೇಳಕ್ಕೆ ಆಗಮಿಸಿದ್ದ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ತಮ್ಮ ಪ್ರಯೋಗಗಳ ವೈಜ್ಞಾನಿಕ ತತ್ವಗಳನ್ನು ವಿವರಿಸಿದರು.

ವಿದ್ಯಾರ್ಥಿಗಳಾದ ಶ್ರೀಕಾರ ಮತ್ತು ಕರಣ್ ವಿಜ್ಞಾನ ಮೇಳದ ಅನುಭವಗಳನ್ನು ಹಂಚಿಕೊಂಡರು. ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಕುಮಾರಿ ನಂದಿನಿ ಪ್ರಾರ್ಥನಾ ಗೀತೆ ಹಾಡಿದರು. ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರು ಹಾಗೂ ಕಾರ್ಯಕ್ರಮದ ಆಯೋಜಕರಾದ ಡಾ. ಅಶ್ವಿನಿ ಕೆ.ಆರ್. ಕಾರ್ಯಕ್ರಮ ನಿರೂಪಿಸಿದರು. ಪ್ರೊ.ಭಾರತಿ ಎಸ್.ಆರ್.ವಂದಿಸಿದರು.

# ರಾಷ್ಟ್ರ ನಿರ್ಮಾಣದಲ್ಲಿ ಕಾನೂನು ಪಾತ್ರ ಮಹತ್ವದ್ದು : ಪ್ರೊ ಬಟ್ಟು ಸತ್ಯನಾರಾಯಣ

ಕಲಬುರಗಿ: ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕಾನೂನು ವಿಭಾಗದ ಮುಖ್ಯಸ್ಥ ಹಾಗೂ ಸಹ ಪ್ರಾಧ್ಯಾಪಕ ಡಾ. ಅನಂತ ಡಿ. ಚಿಂಚೂರೆ ಮತ್ತು ಕಾನೂನು ವಿಭಾಗದ ಸಂಶೋಧನಾ ವಿದ್ಯಾರ್ಥಿ ವನ ರಾಮಮೂರ್ತಿ ಅವರು ರಚಿಸಿರುವ ದಿ ಪವರ್ ಆಫ್ ಲಾ: 75 ಆಕ್ಟ್ಸ್ ದಟ್ ಟ್ರಾನ್ಸ್‌ಫಾರ್ಮ್ಡ್ ಇಂಡಿಯಾ ಪುಸ್ತಕವನ್ನು ವಿಶ್ವವಿದ್ಯಾಲಯದ ಕುಲಪತಿ ಪ್ರೊ ಬಟ್ಟು ಸತ್ಯನಾರಾಯಣ ಅವರು ಲೋಕಾರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ಅವರು ಮಾತನಾಡಿ, ರಾಷ್ಟ್ರ ನಿರ್ಮಾಣದಲ್ಲಿ ಕಾನೂನಿನ ಪಾತ್ರ ಅತ್ಯಂತ ಮಹತ್ವದ್ದು ಹಾಗೂ 2047 ರ ವಿಕಸಿತ ಭಾರತದತ್ತ ಭಾರತದ ಪಯಣವು ಬಲಿಷ್ಠವಾಗಲು ದೇಶದ ಸಂವಿಧಾನ, ಕಾನೂನು ಮತ್ತಷ್ಟು ಆಧಾರವಾಗಲಿದೆ ಎಂದರು.



ಈ ಪುಸ್ತಕವು ಆಧುನಿಕ ಭಾರತವನ್ನು ರೂಪುಗೊಳಿಸುವಿಕೆಯಲ್ಲಿ ಮಹತ್ವದ ಪಾತ್ರವಹಿಸಿದ 75 ಐತಿಹಾಸಿಕ ಕಾನೂನುಗಳ ಸಮಗ್ರ ವಿಶ್ಲೇಷಣೆಯನ್ನು ಒಳಗೊಂಡಿದೆ. ದೇಶದ ಆಡಳಿತ, ಸಾಮಾಜಿಕ ನ್ಯಾಯ, ಆರ್ಥಿಕ ಅಭಿವೃದ್ಧಿ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಅಳವಡಿಸುವಲ್ಲಿ ಕಾನೂನುಗಳ ಪಾತ್ರವನ್ನು ಈ ಕೃತಿ ಆಳವಾಗಿ ಪ್ರತಿಬಿಂಬಿಸುತ್ತದೆ.

ಪುಸ್ತಕ ಲೇಖಕರಾದ ಡಾ. ಅನಂತ ಡಿ. ಚಿಂಚೂರೆ ಅವರು ಪುಸ್ತಕದ ಕುರಿತು ಸಮಗ್ರ ಪರಿಚಯವನ್ನು ಮಾಡಿ ಕಾನೂನು ಎಂಬುದು ಕೇವಲ ನಿಯಂತ್ರಣ ವ್ಯವಸ್ಥೆಯಲ್ಲ, ಇಡೀ ದೇಶದ, ಸಮಾಜದ ಪರಿವರ್ತನೆಯ ಚೇತನಶೀಲ ಸಾಧನವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಈ ಪುಸ್ತಕ ಲೋಕಾರ್ಪಣೆ ಸಂದರ್ಭದಲ್ಲಿ ಪ್ರಾಧ್ಯಾಪಕರುಗಳಾದ ಪ್ರೊ.ಜಿ.ಆರ್.ಅಂಗಡಿ, ಪ್ರೊ.ವಿಕ್ರಂ ವಿಸಾಜಿ, ಪ್ರೊ.ಪಾಂಡುರಂಗ, ಪ್ರೊ.ಬಸವರಾಜ ಕುಬಕಡ್ಡಿ, ಪ್ರೊ.ಭರತ ಕುಮಾರ, ಪ್ರೊ.ಆರ್.ಎಸ್.ಹೆಗಡಿ, ಪ್ರೊ.ಪರಮೇಶ, ಪ್ರೊ.ಪ್ರಶಾಂತ, ಪ್ರೊ.ರಾಘವಯ್ಯ, ಪ್ರೊ.ರವಿ ಕಂಗ್ಯೆ ಉಪಸ್ಥಿತರಿದ್ದರು.

# ಉಚಿತ ಮೀಟರ್ ಗಳಿಗೆ ಹಣ ವಸೂಲಿ ಔರಾದ ಜೆಸ್ಕಾಂ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಿ



ಔರಾದ್ : ಸರ್ಕಾರದಿಂದ ಬರುವ ಉಚಿತ ಮೀಟರ ಗಳಿಗೆ ಇಲ್ಲಿನ ಜೆಸ್ಕಾಂ ಅಧಿಕಾರಿಗಳು ತಲಾ ಒಂದು ಮೀಟರಗೆ 3 ಸಾವಿರದಿಂದ 5 ಸಾವಿರ ಹಣ ವಸೂಲಿ ಮಾಡುತ್ತಿದ್ದಾರೆ ಕೂಡಲೇ ಅಧಿಕಾ-ರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಇಂಡಿಯನ ಕಾಂಗ್ರೆಸ್ ಬ್ರಿಗೇಡ್ ಕಾರ್ಯಕರ್ತರು ಆಗ್ರಹಿಸಿದ್ದಾರೆ.

ಈ ಕುರಿತು ಜೆಸ್ಕಾಂ ಜಿಲ್ಲಾ ಅಭಿಯಂತರರಿಗೆ ಮನವಿ ನೀಡಿದ ಅವರು ಇಲ್ಲಿಯ ಜೆಸ್ಕಾಂ ಅಧಿಕಾ-ರಿಗಳು ಪಟ್ಟಣದಲ್ಲಿ ಇಲ್ಲಿಯವರೆಗೆ ಸುಮಾರು ಸಾವಿರ ಅಳವಡಿಕೆ ಮಾಡಿದ್ದಾರೆ ಎಂಎ???ರ್ ಮೀಟರಗಳು ಸರ್ಕಾರದಿಂದ ಉಚಿತವಾಗಿ ನೀಡಲಾಗುತ್ತದೆ ಆದರೆ ಇಲ್ಲಿ ಪ್ರತಿಯೊಂದಕ್ಕೂ ಹಣ ಕೊಟ್ಟು ಪಡೆಯಬೇಕಾಗಿದೆ ತಾಲೂಕಿನಲ್ಲಿ ಬಡ ಜನರ ಮೇಲೆ ಬರೆ ಎಳೆಯುವ ಕಾರ್ಯ ನಿರಂತರವಾಗಿ ನಡೆಯುತ್ತಿದೆ, ಸರ್ಕಾರದಿಂದ ಬರುವ ಗಂಗಾ ಕಲ್ಯಾಣ ಯೋಜನೆಯಡಿ ನೋಂದಣಿ ಮಾಡಿಕೊಳ್ಳಲು ರೈತರಿಂದ ಎರಡು ಸಾವಿರ ಹಣ ವಸೂಲಿ ಮಾಡಲಾಗುತ್ತಿದೆ ಎಂದು ಆರೋಪಿಸಿದರು. ಕೂಡಲೇ ಅಧಿಕಾರಿಗಳಿಗೆ ಸೂಚನೆ ನೀಡಿ ಭ್ರಷ್ಟಾಚಾರ ಮಾಡುತ್ತಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಇಂಡಿಯನ್ ಕಾಂಗ್ರೆಸ್ ಬ್ರಿಗೇಡ್ ಕರ್ನಾಟಕ ರಾಜ್ಯಾಧ್ಯಕ್ಷ ಅನಿಲಕುಮಾರ ನಿರ್ಮಳೆ, ಭೀಮ ಆರ್ಮಿಯ ದಿನೇಶ್ ಶಿಂಧೆ, ಪ್ರವೀಣ ಕಾರಂಜೆ, ವಿವೇಕ ನಿರ್ಮಳೆ, ಚನ್ನು ಪಾಟೀಲ ಇದ್ದರು.




ಕಲಬುರಗಿ: ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿಯಲ್ಲಿ ಮಾಜಿ ಪ್ರಧಾನಿ ಪಂಡಿತ ಜವಾಹರಲಾಲ ನೆಹರು ರವರ ಪುಣ್ಯ ದಿನವನ್ನು ಆಚರಣೆ ಮಾಡಲಾಯಿತು. ಕಿರಣ ದೇಶಮುಖ, ರೇಣುಕಾ ಸಿಂಗೆ, ಜಯವರ್ಧನ್ ಅಂಬಲಗಿ, ಈರಣ್ಣಾ ಝಳಕಿ, ಶಿವಾನಂದ ತೋರವಿ ಸೇರಿದಂತೆ ಮತ್ತಿತರರು ಇದ್ದರು.

# ಕಾಚೂರ ವಿದ್ಯುತ್ ಉಪ ಕೇಂದ್ರ ಕಾಮಗಾರಿಗೆ ಚಾಲನೆ



ಸೇಡಂ:ತಾಲೂಕಿನ ಕಾಚೂರು ಗ್ರಾಮದಲ್ಲಿ 27 ಕೋಟಿ ರೂಗಳ ವೆಚ್ಚದಲ್ಲಿ 110/33/11 ಕೆ.ವಿ ವಿದ್ಯುತ್ ಉಪಕೇಂದ್ರ ನಿರ್ಮಾಣ ಕಾಮಗಾರಿಗೆ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರಾದ ಡಾ.ಶರಣಪ್ರಕಾಶ ಪಾಟೀಲರು ಚಾಲನೆ ನೀಡಿ ಮಾತನಾಡಿದರು.ಈ ವೇಳೆಯಲ್ಲಿ ಬಸವರಾಜ ಪಾಟೀಲ ಊಡಗಿ, ನಾಗೇಶ್ವರರಾವ್ ಪಾಟೀಲ್, ವಿಶ್ವನಾಥ್ ಪಾಟೀಲ್ ಬೋಮ್ನಳ್ಳಿ, ಬಸವರಾಜ ರೇವಗೊಂಡ ,ಶರಣರೆಡ್ಡಿ ಪಾಟೀಲ್, ವಿರೇಂದ್ರ ಪಾಟೀಲ್ ರೂದ್ನೂರ,ಮಹೇಶ್ ಪಾಟೀಲ್ ತರನಳ್ಳಿ, ವಿಶ್ವನಾಥ್ ಪಾಟೀಲ್ ಕುಕ್ಕುಂದಾ, ಜಗದೇವಪ್ಪ ಪಾಟೀಲ್ ಕೊಂಕನಹಳ್ಳಿ, ಸತೀಶ್ ಪೂಜಾರಿ, ಸಹಾಯಕ ಆಯುಕ್ತರಾದ ಪ್ರಭುರೆಡ್ಡಿ ಕೆಎಎಸ್,ತಹಸಿಲ್ದಾರ್ ಶ್ರೀಮತಿ ಶ್ರೀಯಾಂಕಾ ಎ ಧನಶ್ರೀ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಚನ್ನಪ್ಪ ರಾಯಣ್ಣನವರ, ಸಣ್ಣ ನೀರಾವರಿ ಇಲಾಖೆ ಎಇಇ ಮದಿನಿಕಾಂತ ಶ್ರಿಂಗೇರಿ, ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ರಾಜೇಶ್ ಹಿಪ್ಪರಗಿ ಕೆಪಿಟಿಸಿ-ಎಲ್ ಇವರು ಪ್ರಾಸ್ತಾವಿಕ ಮಾತನಾಡಿದರು

# ಅಕ್ರಮ ಗೋ ಸಾಗಾಣಿಕೆ, ಗೋವಧೆ ನಿಲ್ಲಲಿ : ಶಾಸಕ ಪ್ರಭು ಚವ್ಹಾಣ



ಕಮಲನಗರ:ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಅಕ್ರಮವಾಗಿ ಗೋಹತ್ಯೆ ಹಾಗೂ ಜಾನುವಾರುಗಳ ಅಕ್ರಮ ಸಾಗಣೆ ಕೆಲಸಕ್ಕೆ ಕಡಿವಾಣ ಬೀಳಲಿ ಎಂದು ಮಾಜಿ ಸಚಿವರು ಹಾಗೂ ಶಾಸಕರಾದ ಪ್ರಭು ಬಿ.ಚವ್ಹಾಣ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ಭಾರತೀಯ ಸಂಸ್ಕೃತಿ, ಪರಂಪರೆ ಮತ್ತು ಸನಾತನ ಧರ್ಮದಲ್ಲಿ ಗೋಮಾತೆಗೆ ಅತ್ಯಂತ ಪೂಜನೀಯ ಸ್ಥಾನವಿದೆ. ಗೋವು ಕೇವಲ ಪ್ರಾಣಿಯಲ್ಲ, ಕೋಟ್ಯಂತರ ಹಿಂದೂಗಳ ಭಾವನೆಗಳ ಪ್ರತೀಕ. ಗೋವಿನ ಹಾಲು ಅಮೃತಕ್ಕೆ ಸಮಾನವೆಂದು ಪರಿಗಣಿಸಲಾಗುತ್ತದೆ. ಗೋಮೂತ್ರದಲ್ಲಿ ಔಷಧೀಯ ಗುಣಗಳಿರುತ್ತವೆ. ಗ್ರಾಮೀಣ ಆರ್ಥಿಕ ವ್ಯವಸ್ಥೆ, ಕೃಷಿ ಚಟುವಟಿಕೆ ಮತ್ತು ಜೀವನದೊಂದಿಗೆ ಅವಿನಾಭಾವ ಸಂಬಂಧವಿದೆ. ಆದ-ŕರಿಂದ ಗೋಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಹೇಳಿದ್ದಾರೆ.

ಗೋವುಗಳ ಸಂರಕ್ಷಣೆಗಾಗಿ ಹಿಂದೆ ನಮ್ಮ ಸರ್ಕಾರ ರಾಜ್ಯದಲ್ಲಿ ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ- ಗೋಹತ್ಯೆ ನಿಷೇಧ ಕಾಯ್ದೆ ಜಾರಿಗೊಳಿಸಿದೆ. ಆದ-ŕರೂ ಸಹ ರಾಜ್ಯದಲ್ಲಿ ರಾಜಾರೋಷವಾಗಿ ಅಕ್ರಮ ಗೋ ಸಾಗಾಣಿಕೆ ಮತ್ತು ಗೋವಧೆ ಎಗ್ಗಿಲ್ಲದೆ ನಡೆಯುತ್ತಿರುವುದು ದುಃಖಕರ ಮತ್ತು ಖಂಡನೀಯ ಎಂದು ಆಕ್ರೋಶ ಹೊರ ಹಾಕಿದ್ದಾರೆ.

ಜಿಲ್ಲೆಯ ವಿವಿಧ ಭಾಗಗಳಿಂದ ಗೋವುಗಳನ್ನು ಅಕ್ರಮವಾಗಿ ಹೈದ್ರಾಬಾದ್, ಮುಂಬೈ ಹಾಗೂ ಪುಣೆ ನಗರಗಳಿಗೆ ಸಾಗಿಸಲಾಗುತ್ತಿದೆ. ಈ ಅಕ್ರಮ ಚಟುವಟಿಕೆಗಳನ್ನು ತಡೆಯಲು ಪೊಲೀಸ್ ಇಲಾಖೆ ಮತ್ತು ಪಶು ಸಂಗೋಪನೆ ಅಧಿಕಾರಿಗಳು ವಿಶೇಷ ಕಾರ್ಯಾಚರಣೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದ್ದಾರೆ.

ಜಿಲ್ಲೆಯ ಗಡಿಭಾಗಗಳಲ್ಲಿ ವಿಶೇಷ ಚೆಕ್ ಪೋಸ್ಟ್ ಗಳನ್ನು ಸ್ಥಾಪಿಸಿ, ಜಾನುವಾರುಗಳನ್ನು ಅಕ್ರಮವಾಗಿ ಸಾಗಿಸುವ ವಾಹನಗಳ ಮೇಲೆ ನಿಗಾ ವಹಿಸಬೇಕು. ಅಕ್ರಮ ಗೋಸಾಗಣೆ ಹಾಗೂ ಗೋಹತ್ಯೆಯಲ್ಲಿ ತೊಡಗುವವರ ವಿರುದ್ಧ ಯಾವುದೇ ರಾಜಕೀಯ ಅಥವಾ ಇತರ ಒತ್ತಡಗಳಿಗೆ ಮಣಿಯದೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ

ಬೀದರ ಜಿಲ್ಲೆಯಿಂದ ಗೋಮಾತೆ ಅಕ್ರಮವಾಗಿ ಕಸಾಯಿ ಖಾನೆಗೆ ಹೋಗಬಾರದು. ಗೋಮಾತೆಯ ಬಲಿ ನಡೆಯಕೂಡದು. ಗೋಸಂರಕ್ಷಣೆಯ ವಿಷಯದಲ್ಲಿ ಯಾವುದೇ ರೀತಿಯ ನಿರ್ಲಕ್ಷ್ಯ ಸಹಿಸಲಾಗುವುದಿಲ್ಲ. ಅಕ್ರಮ ಗೋ ಸಾಗಾಣಿಕೆ ಮತ್ತು ಗೋಹತ್ಯೆ ತಡೆಯುವಲ್ಲಿ ವಿಫಲರಾದರೆ ನಾನು ಸುಮ್ಮನಿರುವುದಿಲ್ಲ ಎಂದು ಶಾಸಕರು ಎಚ್ಚರಿಕೆ ನೀಡಿದ್ದಾರೆ.

ಗೋವುಗಳ ಹಿತದೃಷ್ಟಿಯಿಂದ ನಮ್ಮ ಸರ್ಕಾರ ಜಾ-ರಿಗೊಳಿಸಿದ್ದ ಹಲವು ಜನಪ್ರಿಯ ಯೋಜನೆಗಳನ್ನು ಈಗಿನ ಸರ್ಕಾರ ಸ್ಥಗಿತಗೊಳಿಸಿದೆ. ಜಿಲ್ಲೆಗೊಂದು ಗೋಶಾಲೆ ನಿರ್ಮಾಣ ಯೋಜನೆಗೆ ಹಣವಿಲ್ಲ. ಪುಣ್ಯಕೋಟಿ ದತ್ತು ಯೋಜನೆ ನಿಲ್ಲಿಸಲಾಗಿದೆ. ಪ್ರಾಣಿ ಕಲ್ಯಾಣ ಮಂಡಳಿ, ಸಹಾಯವಾಣಿ ಕೇಂದ್ರ ಕೆಲಸ ಮಾಡುತ್ತಿಲ್ಲ. ಪಶು ಸಂಜೀವಿನಿ ಆಂಬ್ಯುಲೆನ್ಸ್ಗಳು ನಿಂತಲ್ಲೇ ತುಕ್ಕು ಹಿಡಿಯುತ್ತಿವೆ. ಗೋಸಂರಕ್ಷಣೆ ಕುರಿತ ಸರ್ಕಾರದ ನಿರ್ಲಕ್ಷ್ಯದಿಂದ ರೈತರು ಮತ್ತು ಗೋಭಕ್ತರಲ್ಲಿ ಆತಂಕ ಮೂಡಿದೆ. ಗೋವಧೆ ತಡೆಯಲು ವಿಫಲವಾಗಿರುವ ಸರ್ಕಾರಕ್ಕೆ ಗೋಮಾತೆಯ ಶಾಪ ತಟ್ಟಲಿದೆ ಎಂದಿದ್ದಾರೆ.

# ರಝಾ ಕೋಚಿಂಗ್ ಇನ್‌ಸ್ಟಿಟ್ಯೂಟ್ ವತಿಯಿಂದ ಟಾಪರ್ ವಿದ್ಯಾರ್ಥಿಗಳ ಸನ್ಮಾನ




ಕಲಬುರಗಿ:ನಗರದ ಮೆಟ್ರೋ ಫಂಕ್ಷನ್ ಹಾಲನಲ್ಲಿ ಅಮೀಸ್ ಶೈಕ್ಷಣಿಕ, ದತ್ತಿ ಮತ್ತು ಕಲ್ಯಾಣ ಟ್ರಸ್ಟ್ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ರಝಾ ಕೋಚಿಂಗ್ ಇನ್‌ಸ್ಟಿಟ್ಯೂಟ್ ನಾಲ್ಕನೇ ವಾರ್ಷಿಕೋತ್ಸವ ಅಂಗವಾಗಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಟಾಪರ್ ವಿದ್ಯಾರ್ಥಿಗಳ ಅಭಿನಂದನಾ ಸಮಾರಂಭವನ್ನು ಅದ್ದೂರಿಯಾಗಿ ಆಯೋಜಿಸಲಾಯಿತು.

ಕಳೆದ ನಾಲ್ಕು ವರ್ಷಗಳಿಂದ ಜಿಲ್ಲೆಯ ವಿವಿಧ ಶಾಲೆಗಳು ಹಾಗೂ ಪಿಯುಸಿ ಕಾಲೇಜುಗಳ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ, ಅವರಿಗೆ ಪ್ರೋತ್ಸಾಹ ಹಾಗೂ ಸನ್ಮಾನ ನೀಡುವ ಕಾರ್ಯವನ್ನು ಸಂಸ್ಥೆ ನಿರಂತರವಾಗಿ ನಡೆಸಿಕೊಂಡು ಬರುತ್ತಿದೆ. ಸಂಸ್ಥೆಯ ಸ್ಥಾಪಕ ಹಾಗೂ ಮಾಲೀಕರಾದ ಸಯ್ಯದ್ ನಯೀಮುದ್ದೀನ್ ಅವರ ಈ ಕಾರ್ಯವನ್ನು ಶಿಕ್ಷಣ ಕ್ಷೇತ್ರದಲ್ಲಿ ಮಾದರಿ ಹೆಜ್ಜೆಯಾಗಿ ಪರಿಗಣಿಸಲಾಗುತ್ತಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಲಬುರಗಿ ಸದರ್ ಖಾಜಿ ಡಾ. ಹಮೀದ್ ಫೈಸಲ್ ಸಿದ್ದೀಖಿ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಗುಲ್ಬರ್ಗಾ ವಿಶ್ವವಿದ್ಯಾಲಯದ ನಾಲ್ಕು ಚಿನ್ನದ ಪದಕ ವಿಜೇತೆ ಸಬಾ ಶರೀನ್, ಸಯ್ಯದ್ ಸಾದಿಯಾ ಹಾಗೂ ಜೆಡಿಎಸ್ ಮುಖಂಡ ಕೃಷ್ಣ ರೆಡ್ಡಿ ಸೇರಿದಂತೆ ಹಲವಾರು ಗಣ್ಯರು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಅತಿಥಿಗಳು, ಸಯ್ಯದ್ ನಯೀಮುದ್ದೀನ್ ಅವರ ಶಿಕ್ಷಣ ಸೇವೆಯನ್ನು ಶ್ಲಾಘಿಸಿ, ಕಲಬುರಗಿಯಲ್ಲಿ ಅನೇಕ ದೊಡ್ಡ ಶಿಕ್ಷಣ ಸಂಸ್ಥೆಗಳು ಮತ್ತು ಉದ್ಯಮಿಗಳು ಇದ್ದರೂ, ಒಂದು ಸಣ್ಣ ಟ್ರಸ್ಟ್ ಮೂಲಕ ಇಂತಹ ಮಹತ್ವದ ಶಿಕ್ಷಣ ಪ್ರೋತ್ಸಾಹ ಕಾರ್ಯಕ್ರಮವನ್ನು ಆಯೋಜಿಸುವುದು ಶ್ಲಾಘನೀಯ ಕಾರ್ಯವಾಗಿದೆ ಎಂದು ಹೇಳಿದರು. ರಝಾ ಕೋಚಿಂಗ್ ಇನ್‌ಸ್ಟಿಟ್ಯೂಟ್ ಕೇವಲ ಪ್ರಶಸ್ತಿ ವಿತರಣೆಗೆ ಸೀಮಿತವಾಗದೆ, ವಿದ್ಯಾರ್ಥಿಗಳು ಮತ್ತು ಪೋಷಕ-ರಿಗೆ ಪ್ರೇರಣೆಯ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಅವರು ಅಭಿಪ್ರಾಯಪಟ್ಟರು. ಇಂದು ಪ್ರಶಸ್ತಿ ಸ್ವೀಕರಿಸುತ್ತಿರುವ ವಿದ್ಯಾರ್ಥಿಗಳು ನಾಳೆ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಸಾಧನೆ ಮಾಡಿ ಜಿಲ್ಲೆಯ ಕೀರ್ತಿಯನ್ನು ಹೆಚ್ಚಿಸಲಿ ಎಂದು ಹಾರೈಸಿದರು. ಈ ಸಂದರ್ಭದಲ್ಲಿ ನಗರದ ಉದ್ಯಮಿಗಳು ಹಾಗೂ ಸಮಾಜಸೇವಕರು, ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿರುವ ಸಯ್ಯದ್ ನಯೀಮುದ್ದೀನ್ ಅವರಂತಹ ಶಿಕ್ಷಣಪ್ರೇಮಿಗಳಿಗೆ ಬೆಂಬಲ ನೀಡಬೇಕು ಎಂದು ಮನವಿ ಮಾಡಲಾಯಿತು. ಕಾರ್ಯಕ್ರಮದಲ್ಲಿ 200ಕ್ಕೂ ಹೆಚ್ಚು ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಟಾಪರ್ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಹಾಗೂ ಪ್ರಮಾಣಪತ್ರಗಳನ್ನು ನೀಡಿ ಗೌರವಿಸಲಾಯಿತು. ಜೊತೆಗೆ ಸಮಾಜಸೇವೆ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ವಿಶೇಷ ಸಾಧನೆ ಮಾಡಿದ ಸಮಾಜಸೇವಕರು ಹಾಗೂ ಶಿಕ್ಷಕರಿಗೂ ಶ್ರೇಷ್ಠತಾ ಪ್ರಶಸ್ತಿಗಳನ್ನು ನೀಡಿ ಸನ್ಮಾನಿಸಲಾಯಿತು.

ಅಮೀಸ್ ಶೈಕ್ಷಣಿಕ, ದತ್ತಿ ಮತ್ತು ಕಲ್ಯಾಣ ಟ್ರಸ್ಟ್ ಅಧೀನದ ರಝಾ ಕೋಚಿಂಗ್ ಇನ್‌ಸ್ಟಿಟ್ಯೂಟ್ ಹಾಗೂ ಇತ್ತಿಹಾದ್ ಮಿಲ್ಲತ್ ಸಂಘಟನೆಯ ಸಂಯುಕ್ತ ಸಹಯೋಗದಲ್ಲಿ ನಡೆದ ಈ ಕಾರ್ಯಕ್ರಮವು ಯಶಸ್ವಿಯಾಗಿ ನೆರವೇ-ರಿದ್ದು, ಭಾಗವಹಿಸಿದವರು ಇದನ್ನು ಸ್ಮರಣೀಯ ಶಿಕ್ಷಣ ಸಮಾರಂಭವೆಂದು ಕೊಂಡಾಡಿದರು.

# ಕಲಬುರಗಿ ಕಲಾವಿದರು ಪುಣೆ ಕಲಾಶಿಬಿರ ಮತ್ತು ಪ್ರದರ್ಶನದಲ್ಲಿ ಮಿಂಚು



ಕಲಬುರಗಿ :ಜಿಲ್ಲೆಯ ಕಲಾವಿದರು ಮೇ 24 ಮತ್ತು 25ರಂದು ಪ್ರತಿಷ್ಠಿತ ಜಿ.ಎಚ್. ರೈಸೋನಿ ಇಂಟರ್‌ನ್ಯಾಷನಲ್ ಸ್ಕಿಲ್ ಟೆಕ್ ವಿಶ್ವವಿದ್ಯಾಲಯದಲ್ಲಿ ನಡೆದ ಎರಡು ದಿನಗಳ ರಾಷ್ಟ್ರೀಯ ಗ್ರೀಷ್ಮಕಾಲ ಕಲಾ ಪ್ರದರ್ಶನ ಮತ್ತು ಭಾರತೀಯ ಕಲಾ ಶಿಬಿರದಲ್ಲಿ ಭಾಗವಹಿಸಿದರು. ಸಮ್ವೇದ್ ಸ್ಕೂಲ್ ಆಫ್ ಆರ್ಟ್, ಮ್ಯೂಸಿಕ್, ವಿಸ್ಯುಅಲೈಸೇಶನ್, ಎಂಟರ್ಟೈಲಮೆಂಟ್ ಅಂಡ್ ಡಿಸೈನ್ ವತಿಯಿಂದ ಸಮ್ವೇದ್ ಆರ್ಟ್ ಗ್ಯಾಲ-ರಿಯಲ್ಲಿ ಸೊಗಸಾಗಿ ಆಯೋಜಿಸಲಾದ ಈ ಸಾಂಸ್ಕೃತಿ-ಕ ಕಾರ್ಯಕ್ರಮವು ವಿಶ್ವವಿದ್ಯಾಲಯ ಆವರಣವನ್ನು ಸೃಜನಶೀಲತೆ, ಬಣ್ಣಗಳು ಮತ್ತು ಕಲಾತ್ಮಕ ಸಂವಾದಗಳ ಸಂಗಮವನ್ನಾಗಿ ರೂಪಿಸಿತು.

ಈ ಕಾರ್ಯಕ್ರಮವನ್ನು ಜಿ.ಎಚ್. ರೈಸೋನಿ ವಿಶ್ವವಿದ್ಯಾಲಯ, ಪುಣೆಯ ಕುಲಪತಿ ಡಾ. ಆರ್. ಡಿ. ಖರಾಡೇಕರ್, ಪ್ರೊ-ಕುಲಪತಿ ಡಾ. ಹೆಂದ್ರೆ, ಸಂವೇದ್ ಶಾಲೆಯ ಡೀನ್ ಡಾ. ಅವಿನಾಶ್ ಡಿ. ಕಾಟೆ, ಪ್ರವೇಶ ವಿಭಾಗದ ಮುಖ್ಯಸ್ಥರು, ರಿಜಿಸ್ಟ್ರಾರ್ ಡಾ. ಅಮೋಲ್ ಪೊತೆ, ಕರ್ನಲ್ ಅಜಿತ್ ಸಿಂಘ್ವಿ ಹಾಗೂ ಇತರರು ಉದ್ಘಾಟಿಸಿದರು.

ರಾಷ್ಟ್ರೀಯ ಮಟ್ಟದ ಈ ಕಾರ್ಯಕ್ರಮದಲ್ಲಿ ದೇಶದ ವಿವಿಧ ಭಾಗಗಳಿಂದ ಆಗಮಿಸಿದ್ದ ಹದಿನಾರು ಖ್ಯಾತ "ಬ್ರಾವಿಸಿಮೊ" ಕಲಾವಿದರು ಭಾಗವಹಿಸಿ ತಮ್ಮದೇ ಆದ ವಿಶಿಷ್ಟ ಕಲಾ ದೃಷ್ಟಿಕೋನ ಮತ್ತು ಸೃಜನಾತ್ಮಕ ಸಂವೇದನೆಯನ್ನು ಪ್ರದರ್ಶನದಲ್ಲಿ ಅನಾವರಣಗೊಳಿಸಿದರು. ಕಲಬುರಗಿಯಿಂದ ಭಾಗವಹಿಸಿದ ಕಲಾವಿದರಲ್ಲಿ ರಾಜಶೇಖರ ಶಾಮಣ್ಣ, ರೆಹಮಾನ್ ಪಟೇಲ್, ದಾದಾ ಚಿತ್ರದುರ್ಗ, ಮೊಹಮ್ಮದ್ ಅಯಾಜುದ್ದೀನ್ ಪಟೇಲ್, ರಾಜಶೇಖರ ಚಿಂಚೋಳ್ಳಿ, ರೇವಣಸಿದ್ದಪ್ಪ ಹೊಟ್ಟಿ ಮತ್ತು ಸಯ್ಯದ್ ಮುಸ್ತಫಾ ಸೇರಿದ್ದಾರೆ. ಇತರೆ ಪ್ರದೇಶಗಳಿಂದ ಸುರೇಂದ್ರ ಕುಡಪಣೆ ಪಾಟೀಲ್, ಮುಂಜಾ ನರ್ವಾಡೆ, ಪೂರ್ಣಿಮಾ ವಾಲುಂಜ್, ವೈಶಾಲಿ ಸಿತ್ರೆ, ದೇವೇಂದ್ರ ಪೊಟ್ದುಖೆ, ಮಧುಕರ್ ಚಂದನಶಿವ ಹಾಗೂ ಆರತಿ ನಾಗ್ಲೆ ಭಾಗವಹಿಸಿದ್ದರು.

ಈ ಕಲಾವಿದರ ಕಲಾಕೃತಿಗಳು ಆಧುನಿಕ ಕಲ್ಪನೆ ಮತ್ತು ಭಾರತೀಯ ಸಾಂಪ್ರದಾಯಿಕ ಕಲಾ ಪರಂಪರೆಯ ಸಮನ್ವಯವನ್ನು ಪ್ರತಿಬಿಂಬಿಸಿತು. ಭಾರತೀಯ ಸಂಸ್ಕೃತಿ, ಗ್ರಾಮೀಣ ಜೀವನ, ಆಧ್ಯಾತ್ಮ ಹಾಗೂ ಸಾಮಾಜಿಕ ಜಾಗೃತಿಗೆ ಸಂಬಂಧಿಸಿದ ವಿಷಯಗಳನ್ನು ಕಲಾಕೃತಿಗಳ ಮೂಲಕ ಮನೋಜ್ಞವಾಗಿ ಅಭಿವ್ಯಕ್ತಿಪಡಿಸಲಾಯಿತು.

# ಎತ್ತ ಸಾಗುತ್ತಿದೆ ಸಾಮಾಜಿಕ ಸಂಬಂಧ

ಉದಯರಶ್ಮಿ ದಿನಪತ್ರಿಕೆ

ಭಾವರಶ್ಮಿ

ಅಂದು ಬೆಳಗ್ಗೆ ನಮ್ಮ ಕೆಳಗಿನ ಮನೆಯ ಅಂಕಲ್ ಸಹ ಸೇರಿ ಒಟ್ಟು 5 ಜನ ಮಾತ್ರ ಆ ಮನೆಯ ಮುಂದೆ ನಿಂತಿದ್ದರು. 'ಇದ್ಯಾಕೆ ಅಲ್ಲಿ ಜನರಿದ್ದಾರೆ?' ಕೇಳಿಕೊಂಡೆ. ಉತ್ತರ ಸಿಗಲಿಲ್ಲ ಸುಮ್ಮನಾದೆ.

ಸ್ವಲ್ಪ ಹೊತ್ತಿನ ಬಳಿಕ ನಮ್ಮ ಮನೆಯ ಕೆಳಗಿನ ಮನೆ ಆಂಟಿ ಕಣ್ಣಿಗೆಬಿದ್ದರು. "ಆಂಟಿ, ಯಾಕೆ ಅಂಕಲ್ ಅಲ್ಲಿದ್ದಾರೆ? ಏನಾಗಿದೆ ಅಲ್ಲಿ?" ಕೇಳಿದೆ. ಆಂಟಿ ಚಿಂತೆ ಬೇರೆಯೇ ಇತ್ತು. "ಅಯ್ಯೊ, ಆ ಮನೆಯ ತಾತಪ್ಪ ತೀರಿಕೊಂಡಿದ್ದಾರೆ. ಇವರು ಎಲ್ಲೇ ಸಾವು ಅಂ-ದರೂ ಹೋಗಿಬಿಡ್ತಾರೆ. ಅವರಿಗೆ ನೆಂಟರಾರು ಇಲ್ವಂತೆ. ಇವರು ಇನ್ನೂ ತಿಂಡಿಯನ್ನೂ ತಿಂದಿಲ್ಲ, ಹೋಗಿ ಅಲ್ಲಿ ಚಟ್ಟ ಕಟ್ಟಿಸುತ್ತಿದ್ದಾರೆ". ನನಗೆ ಏನು ಹೇಳಬೇಕೊ ತಿಳಿಯಲೆ ಇಲ್ಲ. "ಹೋಗ್ಲಿ ಬಿಡಿ ಆಂಟಿ. ಪುಣ್ಯದ ಕೆಲಸ, ಮಾಡಲಿ. ಪಾಪ ಅವರಿಗೆ ಯಾರು ಇಲ್ಲ ಅಂದರೆ, ಯಾರಾದರು ಒಬ್ಬರು ನಿಂತು ನೋಡಲೇಬೇಕಲ್ಲ" ಎಂದವಳೆ. ಒಳಗೆ ಬಂದುಬಿಟ್ಟೆ.





ಆದರೆ ಮನಸು ಮಾತ್ರ ಅಲ್ಲೇ ಸುತ್ತುತಿತ್ತು. 'ಸಾವು ಎಂದರೂ ಆ ರಸ್ತೆಯ ಜನರು ಹೋಗಿಲ್ವೆ?' ಯಾಕೊ ಸಮಾಧಾನ ಅನ್ನಿಸಲೇ ಇಲ್ಲ.

ಮನುಷ್ಯ ಸಾಧಿಸಿದ್ದೀನೆಂದುಕೊಂಡಿದ್ದಾನೆ. ಆದರೆ ಅದು ನಿಜವೇ ಎಂಬುದೇ ಸಂಶಯ. ಕಸ ರಸವಾಗುವುದು ಬೇಡ. ಕೊನೆಯ ಪಕ್ಷ ರಸವನ್ನು ರಸವಾಗಿ ಉಳಿಸಿದ್ದರಾದರೂ ಸಾಕಿತ್ತು. ಆದರೆ ರಸ ಕಸವಾಗುತ್ತಿದೆ. ಭೂಮಿ ಸತ್ವ ಕಳೆದುಕೊಳ್ಳುತ್ತಿದೆ. ಹಾಗೇಯೇ ಭೂಮಿಯ ಮೇಲಿನ ಮನುಷ್ಯನ ಮನಸ್ಸಿನ ಭಾವನೆಗಳು ಕೂಡ.

ಕಾರ್ಯಕ್ರಮಗಳಿಗೆ ಹೋದಾಗ, ನೆಂಟರಿಷ್ಟರು ಸಿಕ್ಕಿದರೆ, ಅವರೇ ಮಾತನಾಡಿಸಲಿ ನಾನೇಕೆ ಮೊದಲು ಹೋಗಿ ಮಾತನಾಡಿಸಬೇಕು ಎಂಬ ಅಹಂ. ಪಕ್ಕದ ಮನೆಯವರ ಜೊತೆ ಕುಶಲೋಪರಿ ಹಂಚಿಕೊಳ್ಳುವುದರಲ್ಲಿ ಅಹಂ, ಸಾರ್ವಜನಿಕ ಜಾಗಗಳಲ್ಲಿ ಪಕ್ಕದಲ್ಲಿ ಕುಳಿತಿರುವವರ ಜೊತೆ ಮಾತನಾಡಿಸುವಲ್ಲಿ ಅಹಂ. ಹತ್ತಿರದಲ್ಲಿರುವವರನ್ನು ಮಾತನಾಡಿಸಲು ಆ 'ಈಗೊ' ಎಂಬ ಶತ್ರು ಬಿಡೋದೆ ಇಲ್ಲ. ಅದಕ್ಕೆ 'ಅಹಂ' ಎಂಬ ಹೆಸರು ಕೊಡಬೇಕೊ ಇಲ್ಲ 'ನಮಗ್ಯಾಕೆ ಬೇಕು' ಎಂಬ ತಾತ್ಸಾರ ಎಂದು ಹೇಳಬೇಕೊ ತಿಳಿಯದು. ಆದರೆ ಅದು ಬೇಡವೆನಿಸುವಷ್ಟರಮಟ್ಟಿಗೆ ವಿಮುಖರಾಗುತ್ತಿರುವುದಂತು ನಿಜ. 'ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೇ ಜೀವನ ಎಂಬ ಗೋಪಾಲಕೃಷ್ಣ ಅಡಿಗರ ಸಾಲುಗಳಂತೆ, ಅಕ್ಕ-ಪಕ್ಕದವರನ್ನು ಬಿಟ್ಟು, ಮೊಬೈಲ್ನಲ್ಲಿ ಕರೆಯುವ ಯಾವುದೋ ಮೋಹನ ಮುರಳಿಯ ನಾದಕ್ಕೆ ಕಿವಿಕೊಡುವುದೇ ಹೆಚ್ಚಾಗಿಬಿಟ್ಟಿದೆ.

Facebook Friends, ಯೋಗಬಂಧುಗಳು, ಈriend-chat, ಇನ್ಸ್ಟಾಗ್ರಾಮ್ ಹೀಗೆ ಹೊಸ ಹೊಸ ಸಂಬಂಧಗಳನ್ನು ಹುಡುಕಿಕೊಂಡು ಹೋಗುತ್ತಾ ಇದ್ದೇವೆ. ಆದರೆ ನಮ್ಮವರಲ್ಲದವರನ್ನು ನಂಬುವುದಾದರೂ ಹೇಗೆ? ಸಾಧನೆ ಅಭಿವೃದ್ಧಿಗೆ ಪೂರಕವಾಗಿರಬೇಕೇ ಹೊರತು, ಮಾರಕವಾಗಬಾರದು. ಎಲ್ಲಾ ಯಂತ್ರಗಳ ಜೊತೆ, ಮನುಷ್ಯನ ಮನಸ್ಸು ಕೂಡ ಜೀವಕಳೆದುಕೊಂಡಿರುವ ಯಂತ್ರವೇ ಆಗಿಬಿಡುತ್ತಿದೆ . ಅದಕ್ಕೆ ಸ್ವಲ್ಪ ಭಾವನೆಗಳ ಚಿಲುಮೆಯನ್ನು ತುಂಬಿಸಬೇಕು. ಸಾಧನೆ ಬೇಕಾದಷ್ಟು ಆಗಿದೆ. ಜೊತೆಯಲ್ಲಿಯೇ ಸಮಾಜವನ್ನು ಬದಲಾಯಿಸುತ್ತಾ ಬರುತ್ತಿದೆ. ಈವಾಗಲಾದರು ಎಚ್ಚುತ್ತುಕೊಳ್ಳದಿದ್ದರೆ ಪರೋಕ್ಷವಾಗಿ ಬಾಧಿಸುವುದಂತು ಖಂಡಿತ.

ಲೇಖನ
ರಶ್ಮಿ ಕೆ. ವಿಶ್ವನಾಥ್,
ಮೈಸೂರು





# ಶಿಕ್ಷಣ ಸುಧಾರಣಾ ಸಮಿತಿಗೆ ಸಿದ್ಧಲಿಂಗ ಚೌಧರಿ ನಾಮ ನಿರ್ದೇಶನ

■ ಉದಯರಶ್ಮಿ ದಿನಪತ್ರಿಕೆ



ಸಿಂದಗಿ: ಕರ್ನಾಟಕ ಸರ್ಕಾರದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಅಧಿಸೂಚನೆ ಅನ್ವಯ, ವಿಜಯಪುರ ಜಿಲ್ಲೆಯ ಸಿಂಧಗಿ ವಿಧಾನಸಭಾ ಕ್ಷೇತ್ರ ಮಟ್ಟದ ಶಿಕ್ಷಣ ಸುಧಾರಣಾ ಸಮಿತಿಗೆ ಸಿಂಧಗಿಯ ಶಿಕ್ಷಕರಾದ ಶ್ರೀ ಸಿದ್ಧಲಿಂಗ ಚೌಧರಿ ಅವರನ್ನು ಸದಸ್ಯರಾಗಿ ನಾಮ ನಿರ್ದೇಶನ ಮಾಡಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ಇಪಿ 11 ಎಎಲ್‌ಬಿ 2025, ದಿನಾಂಕ: 21.02.2025 ರ ಅನ್ವಯ ಈ ಸಮಿತಿಯನ್ನು ರಚಿಸಲಾಗಿದ್ದು, ತಾಲ್ಲೂಕು ಮಟ್ಟದಲ್ಲಿ ಮಕ್ಕಳ ದಾಖಲಾತಿ, ಹಾಜರಾತಿ, ಕಲಿಕೆ, ಮಾನವ ಸಂಪನ್ಮೂಲದ ಸಮರ್ಪಕ ಬಳಕೆ ಸೇರಿದಂತೆ ಶಿಕ್ಷಣ ಕ್ಷೇತ್ರದ ಸುಧಾರಣೆಗೆ ಸಂಬಂಧಿಸಿದ ಪ್ರಮುಖ ಅಂಶಗಳ ಕುರಿತು ಕಾರ್ಯನಿರ್ವಹಿಸಲು ಒಟ್ಟು 18 ಜನರ ಸಮಿತಿ ರಚಿಸಲಾಗಿದೆ.

ಈ ಸಮಿತಿಗೆ ಸಿಂಧಗಿ ಕ್ಷೇತ್ರದ ಶಾಸಕರಾದ ಅಶೋಕ ಎಮ್ ಮನಗೂಳಿ ಅವರು ಅಧ್ಯಕ್ಷರಾಗಿದ್ದು, ಸರ್ಕಾರಿ ಪ್ರೌಢಶಾಲೆ ಬಂಕಲಗಿಯ ಶಿಕ್ಷಕರಾದ ಸಿದ್ಧಲಿಂಗ ಚೌಧರಿ ಅವರನ್ನು ಸದಸ್ಯರಾಗಿ ನೇಮಕ ಮಾಡಲಾಗಿದೆ.ಶಿಕ್ಷಣ ಕ್ಷೇತ್ರದಲ್ಲಿ ಹಲವು ಸಾಮಾಜಿಕ ಹಾಗೂ ಶೈಕ್ಷಣಿಕ ಚಟುವಟಿಕೆಗಳ ಮೂಲಕ ಗುರುತಿಸಿಕೊಂಡಿರುವ ಸಿದ್ಧಲಿಂಗ ಚೌಧರಿ ಅವರ ಆಯ್ಕೆಗೆ ಶಿಕ್ಷಕ ವೃಂದ, ಸ್ನೇಹಿತರು ಹಾಗೂ ವಿವಿಧ ಸಂಘಟನೆಗಳ ಮುಖಂಡರು ಹರ್ಷ ವ್ಯಕ್ತಪಡಿಸಿ ಅಭಿನಂದನೆ ಸಲ್ಲಿಸಿದ್ದಾರೆ.

# ಬಿಎಸ್‌ಎನ್‌ಎಲ್ ಅಧಿಕಾರಿಗಳಿಗೆ ಸಂಸದ ಜಿಗಜಿಣಗಿ ತರಾಟೆ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಬಿಎಸ್‌ಎನ್‌ಎಲ್ ನೆಟವರ್ಕ್ ಸಮಸ್ಯೆಯಾಗಿ ಜನರಿಗೆ ವ್ಯಾಪಕ ತೊಂದರೆಯಾಗಿದೆ, ಈ ನೆಟವರ್ಕ್ ಸಮಸ್ಯೆಯನ್ನು ನಿವಾರಣೆ ಮಾಡುವಂತೆ ನಾನೇ ಸ್ವತ: ಅಧಿಕಾರಿಗಳಿಗೆ ತರಾಟೆಗೆ ತೆಗೆದುಕೊಂಡಿರುವೆ ಎಂದು ಸಂಸದ ರಮೇಶ ಜಿಗಜಿಣಗಿ ಹೇಳಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಬಿಎಸ್‌ಎನ್‌ಎಲ್ ನೆಟವರ್ಕ್ ತೊಂದರೆ ವಿಜಯಪುದಲ್ಲಿಯೂ ವ್ಯಾಪಕವಾಗಿದೆ, ಈ ಬಗ್ಗೆ ಅನೇಕ ಗ್ರಾಹಕರು ತೊಂದರೆ ಎದುರಿಸುತ್ತಿದ್ದಾರೆ, ಈ ಸಮಸ್ಯೆಯ ಬಗ್ಗೆ ಅನೇಕ ಗ್ರಾಹಕರು ಸಹ ನನ್ನ ಗಮನಕ್ಕೆ ತಂದಿದ್ದಾರೆ. ಈ ಹಿನ್ನೆಲೆಯಲ್ಲಿ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಸಂಬಂಧಿಸಿದ ಅಧಿಕಾರಿಗಳನ್ನು ನಾನು ಈ ವಿಷಯವಾಗಿ ತರಾಟೆಗೆ ತೆಗೆದುಕೊಂಡಿದ್ದು, 'ಇಂದು ದೂರ ಸಂಪರ್ಕ ಒಂದು ಜೀವನದ ಅವಿಭಾಜ್ಯ ಅಂಗವಾಗಿದೆ, ಕೇವಲ ಸಂಪರ್ಕ ಅಷ್ಟೇ ಅಲ್ಲದೇ ದೈನಂದಿನ ವ್ಯಾಪಾರ–ವಹಿವಾಟುಗಳು ಅಂತರ್ಜಾಲ ಕೇಂದ್ರಿತವಾಗಿವೆ, ಜನಸಾಮಾನ್ಯರು ಸಹ ಯುಪಿಐ ಮೂಲಕವೇ ಪೇಮೆಂಟ್ ಮಾಡುವುದು ಸಾಮಾನ್ಯವಾಗಿದೆ, ಆದರೆ ನೆಟವರ್ಕ್ ಇಲ್ಲದೇ ಗ್ರಾಹಕರು ಎದುರಿಸುತ್ತಿರುವ ಸಂಕಷ್ಟ ನಿಮಗೆ ಅರ್ಥವಾಗುವುದಿಲ್ಲವೇ ಎಂದು ಅಧಿಕಾರಿಗಳಿಗೆ ತರಾಟೆಗೆ ತೆಗೆದುಕೊಂಡಿರುವೆ, ಶೀಘ್ರದಲ್ಲಿಯೇ ಎದುರಾಗಿರುವ ತಾಂತ್ರಿಕ ಸಮಸ್ಯೆ ನಿವಾರಣೆ ಮಾಡುವ ಭರವಸೆಯನ್ನು ಅಧಿಕಾರಿಗಳ ನೀಡಿದ್ದಾರೆ ಎಂದು ಸಂಸದರು ತಿಳಿಸಿದ್ದಾರೆ.

# ಪೇಪರ್‌ಲೆಸ್ ನೋಂದಣಿ ಹಿಂಪಡೆಯುವತೆ ಒತ್ತಾಯ :ಧರಣಿ

■ ಉದಯರಶ್ಮಿ ದಿನಪತ್ರಿಕೆ



ಮುದ್ದೇಬಿಹಾಳ: ನೋಂದಣಿ ಇಲಾಖೆ ಪೇಪರ್‌ಲೆಸ್ ನೋಂದಣಿ ವ್ಯವಸ್ಥೆ ಜಾರಿಗೆ ತಂದಿರುವದನ್ನ ಹಿಂಪಡೆಯಬೇಕು ಎಂದು ಒತ್ತಾಯಿಸಿ ಬುಧವಾರ ರಾಜ್ಯದಾದ್ಯಂತ ದಸ್ತು ಬರಹಗಾರರ ಚಾರಿಟೇಬಲ್ ಟ್ರಸ್ಟ್ ನಡೆಸಿದ ಮುಷ್ಕರಕ್ಕೆ ಇಲ್ಲಿನ ತಾಲೂಕು ಘಟಕ ಬೆಂಬಲ ಸೂಚಿಸಿತು.

ಬೆಳಿಗ್ಗೆಯಿಂದಲೇ ಸಾಂಕೇತಿಕ ಲೇಖನಿ ಬಂದ್ ಮಾಡಿ ತಾಲೂಕು ಘಟಕದದಿಂದ ಸಭೆ ನಡೆಸಿದರು. ಬಳಿಕ ಸಿ.ಎಂ ಸಿದ್ಧರಾಮಯ್ಯನವರಿಗೆ ಬರೆದ ಮನವಿ ಪತ್ರವನ್ನು ತಹಸೀಲ್ದಾರ ಕೀರ್ತಿ ಚಾಲಕ ಅವರಿಗೆ ನೀಡಿದರು. ಈ ವೇಳೆ ಟ್ರಸ್ಟ್ ನ ತಾಲೂಕು ಅಧ್ಯಕ್ಷ ಎಚ್.ಆರ್.ಬಾಗವಾನ ಮಾಧ್ಯದವರೊಂದಿಗೆ ಮಾತನಾಡಿ ಸರ್ಕಾರದಿಂದ ಪರವಾನಿಗೆ ಪಡೆದು ದಶಕಗಳಿಂದ ದಸ್ತಾವೇಜು ಬರಹಗಾರರು ಸಾರ್ವಜನಿಕರ ಆಸ್ತಿ ನೋಂದಣಿ ಕಾರ್ಯದಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದು, ಇಲಾಖೆಯ ನಿಯಮಾವಳಿಗಳ ಪ್ರಕಾರ ಸೇವೆ ಸಲ್ಲಿಸುತ್ತಾ ಬಂದಿದ್ದೇವೆ. ಕಾವೇರಿ 2.0 ತಂತ್ರಾಂಶದಬಳಿಕಇದೀಗಕಾವೇರಿ 3 ಮೂಲಕ "ಪೇಪರ್ ಲೆಸ್ ನೋಂದಣಿ" ವ್ಯವಸ್ಥೆಯನ್ನು ಕೆಲ ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಜಾರಿಗೆ ತರಲಾಗಿದೆ. ಇದರಿಂದ ಸಾರ್ವಜನಿಕರು ಮತ್ತು ದಸ್ತುಬರಹಗಾರರ ನಡುವೆ ಅನೇಕ ಸಮಸ್ಯೆಗಳು ಉದ್ಭವಿಸುವ ಸಾಧ್ಯತೆ ಇದೆ. ಸಾರ್ವಜನಿಕರ ಭೂಮಿ, ಆಸ್ತಿ ಸಂಬಂಧಿತ ದಾಖಲೆಗಳನ್ನು ಈ ಹಿಂದೆ ಕೈಬರಹ, ನಂತರ ಟೈಪಿಂಗ್ ಹಾಗೂ ಗಣಕೀಕರಣದ ಮೂಲಕ ನೋಂದಣಿ ಮಾಡುತ್ತಾ ಬಂದಿದ್ದು, ದಸ್ತಾವೇಜು ಬರಹಗಾರರು ಇಲಾಖೆ ಮತ್ತು ಸಾರ್ವಜನಿಕರ ನಡುವೆ ಸಂಪರ್ಕ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅಲ್ಲದೆ ಸರ್ಕಾರಕ್ಕೆ ರಾಜಸ್ವ ಸಂಗ್ರಹವಾಗುವಲ್ಲಿ ನಮ್ಮ ಪಾತ್ರ ಮಹತ್ವದ್ದಾಗಿದೆ. ಹೀಗಿರುವಾಗ ಪೇಪರ್ ಲೆಸ್ ವ್ಯವಸ್ಥೆ ಜಾರಿಯಾದರೆ ಲಕ್ಷಾಂತರ ರೂಪಾಯಿ ಮೌಲ್ಯದ ಆಸ್ತಿಗಳನ್ನು ಖರೀದಿಸುವವರಿಗೆ ತಮ್ಮ ಆಸ್ತಿ ಕುರಿತು ಭೌತಿಕ ದಾಖಲೆಗಳು ಕೈಯಲ್ಲಿ ಇರುವುದಿಲ್ಲ. ತಂತ್ರಜ್ಞಾನದಲ್ಲಿ ದೋಷ ಉಂಟಾದರೆ ದಾಖಲೆಗಳ ಭದ್ರತೆ ಬಗ್ಗೆ ಆತಂಕ ಎದುರಾಗಬಹುದು. ಆದ್ದರಿಂದ ಸರ್ಕಾರ ಪೇಪರ್ ಲೆಸ್ ವ್ಯವಸ್ಥೆಯನ್ನು ಹಿಂಪಡೆದು, ದಸ್ತಾವೇಜು ಬರಹಗಾರರಿಗೆ ಪ್ರತ್ಯೇಕ ಲಾಗಿನ್ ವ್ಯವಸ್ಥೆ ಕಲ್ಪಿಸಬೇಕು ಎಂದು ಸರ್ಕಾರಕ್ಕೆ ಒತ್ತಾಯಿಸುವದಾಗಿ ತಿಳಿಸಿದರು.

ಈ ವೇಳೆ ಟ್ರಸ್ಟ್ ನ ಜಿಲ್ಲಾ ಸಂಘಟಕ ರಾಜು ಜೋಳದ, ತಾಲೂಕು ಉಪಾಧ್ಯಕ್ಷ ರಾಜು ಪಾವಲೆ, ಪ್ರ.ಕಾರ್ಯದರ್ಶಿ ಡಿ.ಎಚ್.ತೊಗರಿ, ಸದಸ್ಯರಾದ ಎಚ್.ಎಸ್. ನಾಯ್ಕೋಡಿ, ಡಿ.ಎಸ್. ಹಿರೇಮಠ, ಎಸ್.ಬಿ.ಕಡಿ, ಸಲೀಂ ಮುಲ್ಲಾ, ಆರ್.ಎ.ನಾಡಗೌಡ, ಆರ್. ಎಸ್.ಸಂಕಿನ್, ಎಂ.ಎಂ.ಕಟಗಿ ಮತ್ತೀತರರು ಇದ್ದರು.

# ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನವರ 604ನೇ ಜಯಂತಿ ಅದ್ದೂರಿಯಾಗಿ ಆಚರಣೆ



ಬೀದರ : ಟಿ ಮಿರ್ಜಾಪೂರಗ್ರಾಮದ ಹೇಮರೆಡ್ಡಿ ಮಲ್ಲಮ್ಮರೆಡ್ಡಿಜನ ಸಂಘದಿಂದ ಮಹಾಸಾಧ್ವಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನವರ 604ನೇ ಜಯಂತಿಉತ್ಸವಅದ್ದೂರಿಯಾಗಿಆಚರಿಸಲಾಯಿತು.ಅದೇರೀತಿಯಾಗಿ ನೂತನವಾಗಿಅಧ್ಯಕ್ಷರಾದ ಶ್ರೀ ಈಶ್ವರರೆಡ್ಡಿಅವರಿಗೆಅಧ್ಯಕ್ಷ ಸ್ಥಾನ ವಹಿಸಲಾಯಿತು.

ಈ ಸಂದರ್ಭದಲ್ಲಿ ಮಾಜಿಅಧ್ಯಕ್ಷರಾದ ಮಾಣಿಕ್‌ರೆಡ್ಡಿ.ರೆಡ್ಡಿ ಸಮಾಜದ ಮುಖಂಡರಾದ ಸಿಎಲ್ ರೆಡ್ಡಿ. ಅಂಬಣ್ಣಗೋರ್ಲಾ. ವಿಟ್ಟಲ್‌ರೆಡ್ಡಿ. ಅಂಜರೆಡ್ಡಿ.ವೀರರೆಡ್ಡಿ. ಹನುಮಂತ್‌ರೆಡ್ಡಿ. ಮಹೇಶ್‌ರೆಡ್ಡಿ. ವಿಜೇಂದರ್‌ರೆಡ್ಡಿ. ಸಮಸ್ತ ಊರಿನಜನತೆಯೊಂದಿಗೆ ಹೆಣ್ಣು ಮಕ್ಕಳು ತಮ್ಮತಲೆಯ ಮೇಲೆ ಕಳಸ ಹೊತ್ತ ಮೆರವಣಿಗೆ ಮಾಡುತ್ತ ಲಕ್ಷ್ಮಿ ಮಂದಿರಕ್ಕೆ ಬಂದುತಲುಪಿತ್ತು ನಂತರಶಿವಶರಣೆ ಹೇಮರೆಡ್ಡಿ ಮಲ್ಲಮ್ಮತೊಟ್ಟಿಲು ಕಾರ್ಯಕ್ರಮನಡೆಯಿತು ನಂತರ ಮಹಾ ಪ್ರಸಾದ ವಿತರಣೆ ಮಾಡಲಾಯಿತು.

# ಬಿ.ಎಲ್.ಡಿ.ಇ ಡೀಮ್ಡ್ ವಿವಿ & ಅಮೇರಿಕ ಯುನಿವರ್ಸಿಟಿ ನಡುವೆ ಒಡಂಬಡಿಕೆ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ನಗರದ ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯ ಮತ್ತು ಅಮೇರಿಕದ ಯುನಿವರ್ಸಿಟಿ ಆಫ್ ಇಲಿನಾಯಿಸ್ ಚಿಕ್ಯಾಗೊ ನಡುವೆ ಶೈಕ್ಷಣಿಕ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಕಳೆದ ಮಾರ್ಚ್ ತಿಂಗಳಲ್ಲಿ ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ಕುಲಪತಿ ಡಾ. ಅರುಣ ಚಂ. ಇನಾಮದಾರ ಅವರು ಅಮೇರಿಕಕ್ಕೆ ತೆರಳಿದ್ದರು. ಅಲ್ಲಿ ಇಲಿನಾಯಿಸ ವಿಶ್ವವಿದ್ಯಾಲಯ, ಚಿಕ್ಯಾಗೊ ಅಂತರಾಷ್ಟ್ರೀಯ ಆರೋಗ್ಯ ವಿಭಾಗದ ಅಸೋಶಿಯೇಟ ಡೀನ ಡಾ. ಪ್ರಭಾಕರ ಬೆಳ್ಳೂರ ಅವರೊಂದಿಗೆ ಈ ಒಡಂಬಡಿಕೆ ಕುರಿತು ಚರ್ಚಿಸಿದ್ದರು. ಈಗ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಈ ಒಡಂಬಡಿಕೆಯಿಂದಾಗಿ ಎರಡೂ ವಿಶ್ವವಿದ್ಯಾಲಯಗಳು ಶೈಕ್ಷಣಿಕ ಸಹಭಾಗಿತ್ವದಲ್ಲಿ ಕಾರ್ಯ ನಿರ್ವಹಿಸಲಿವೆ. ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ಕುಲಾಧಿಪತಿ ಬಸನಗೌಡ ಎಂ, ಪಾಟೀಲ, ಸಮಕುಲಾಧಿಪತಿ ಡಾ. ವೈ. ಎಂ. ಜಯರಾಜ, ಕುಲಸಚಿವ ಡಾ. ರಾಘವೇಂದ್ರ ಕುಲಕರ್ಣಿ ಹಾಗೂ ವೈದ್ಯಕೀಯ ಮಹವಿದ್ಯಾಲಯದ ಪ್ರಾಚಾರ್ಯೆ ಡಾ. ತೇಜಸ್ವಿನಿ ವಲ್ಲಭ ಅವರ ಮಾರ್ಗದರ್ಶನದಲ್ಲಿ ಈ ಶೈಕ್ಷಣಿಕ ವರ್ಷದಿಂದಲೇ ಈ ಒಡಂಬಡಿಕೆ ಜಾರಿಗೆ ಬಂದಿದೆ. ಅದರಂತೆ ಬಿ. ಎಲ್. ಡಿ. ಇ. ಸಂಸ್ಥೆಯ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಿಗೆ ವಿದೇಶಿ ವಿಶ್ವವಿದ್ಯಾಲಯಗಳ ಶೈಕ್ಷಣಿಕ ಅನುಭವ ಮತ್ತು ಜಾಗತಿಕ ಮಟ್ಟದ ಪರಿಚಯವನ್ನು ಪಡೆಯಲು ಹೊಸ ಅವಕಾಶಗಳು ದೊರೆಯಲಿವೆ.

ಈಗ ಇಂಟರ್ನ್ ಆಗಿರುವ ವಿದ್ಯಾರ್ಥಿನಿ ಮೇಘನಾ ಅವರು ಯುನಿವರ್ಸಿಟಿ ಆಫ್ ಇಲಿನಾಯಿಸ್ ಚಿಕಾಗೊನಲ್ಲಿ ನ್ಯೂರೋಸರ್ಜರಿ ವಿಭಾಗದಲ್ಲಿ ಎಲೆಕ್ಟಿವ್ ತರಬೇತಿಗೆ ಆಯ್ಕೆಯಾಗಿರುವುದು ಗಮನಾರ್ಹವಾಗಿದೆ. ಇಂಥ ಅಂತಾರರಾಷ್ಟ್ರೀಯ ಶೈಕ್ಷಣಿಕ ಸಹಕಾರಗಳು ವಿದ್ಯಾರ್ಥಿಗಳ ಭವಿಷ್ಯಕ್ಕೆ ಹೊಸ ಅವಕಾಶಗಳನ್ನು ಸೃಷ್ಟಿಸಲಿದ್ದು, ಜಾಗತಿಕ ಮಟ್ಟದಲ್ಲಿ ಶೈಕ್ಷಣಿಕ ಹಾಗೂ ಸಂಶೋಧನೆ ಕ್ಷೇತ್ರಗಳಲ್ಲಿ ಉತ್ತಮ ಬೆಳವಣಿಗೆಗೆ ನೆರವಾಗಲಿವೆ ಎಂದು ವಿಶ್ವವಿದ್ಯಾಲಯದ ಸಂಶೋಧನಾ ವಿಭಾಗದ ಡೀನ್ ಡಾ. ಎಂ. ಎಂ. ಪಾಟೀಲ ಮಾಧ್ಯಮ ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

### ಹುಬ್ಬಳ್ಳಿ ಎಚ್.ಸಿ.ಜಿ ಕ್ಯಾನ್ಸರ್ ಆಸ್ಪತ್ರೆಯ ಸಂದರ್ಶಕ ತಜ್ಞವೈದ್ಯ ಡಾ. ಶ್ರೀಕಾಂತ ರವಿಚಂದ್ರನ್ ಅಭಿಮತ

# ಜಠರದ ಕ್ಯಾನ್ಸರ್ ಗೆ ಕಾರಣವಾಗಬಹುದಾದ ಗ್ಯಾಸ್ಟ್ರಿಕ್ ಸಮಸ್ಯೆ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಅತಿಯಾದ ಆಮ್ಲೀಯತೆ ಅಥವಾ ಗ್ಯಾಸ್ಟ್ರಿಕ್ ಸಮಸ್ಯೆ ಜಠರದ ಕ್ಯಾನ್ಸರ್ ಗೆ ಕಾರಣವಾಗಬಹುದು ಎಂದು ಹುಬ್ಬಳ್ಳಿ ಎಚ್.ಸಿ.ಜಿ ಕ್ಯಾನ್ಸರ್ ಆಸ್ಪತ್ರೆಯ ಸಂದರ್ಶಕ ತಜ್ಞವೈದ್ಯ ಡಾ. ಶ್ರೀಕಾಂತ ರವಿಚಂದ್ರನ್ ಹೇಳಿದ್ದಾರೆ.

ಮಂಗಳವಾರ ನಗರದ ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ಶ್ರೀ. ಬಿ. ಎಂ. ಪಾಟೀಲ ವೈದ್ಯಕೀಯ ಮಹಾವಿದ್ಯಾಲಯದ ಶಸ್ತ್ರ ಚಿಕಿತ್ಸೆ ವಿಭಾಗ ಆಯೋಜಿಸಿದ್ದ ಜಠರದ ಕ್ಯಾನ್ಸರ್ ಕುರಿತು ಅತಿಥಿ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

40 ವರ್ಷ ದಾಟಿದ ವಯಸ್ಕರು ಗ್ಯಾಸ್ಟ್ರಿಕ್ ಸಮಸ್ಯೆಯನ್ನು ನಿರ್ಲಕ್ಷಿಸಬಾರದರು. ಔಷಧ ಅಂಗಡಿಗಳಲ್ಲಿ ಸ್ವಚಿಕಿತ್ಸೆಯನ್ನು ಪಡೆಯದೆ ಉದರದರ್ಶಕ ಯಂತ್ರದ (ಎಂಡೊಸ್ಕೋಪಿ) ತಪಾಸಣೆ ಮಾಡಿಸಿಕೊಂಡರೆ ಜಠರದ ಕ್ಯಾನ್ಸರ್ ನ್ನು ಆರಂಭಿಕ ಹಂತದಲ್ಲಿಯೇ ಪತ್ತೆ ಮಾಡಿ ಸೂಕ್ತ ಚಿಕಿತ್ಸೆಯ ಮೂಲಕ ಸಂಪೂರ್ಣವಾಗಿ ಗುಣಪಡಿಸಲು ಸಾಧ್ಯವಿದೆ ಎಂದು ಅವರು ಹೇಳಿದರು.

ಜಠರದ ಕ್ಯಾನ್ಸರ್ ರೋಗದ ನಾನಾ ಗುಣಲಕ್ಷಣಗಳು ಮತ್ತು ತಪಾಸಣೆ ವಿಧಾನಗಳು ಹಾಗೂ ಲಭ್ಯವಿರುವ ಚಿಕಿತ್ಸೆ ಕ್ರಮಗಳನ್ನು ಅವರು ಪ್ರಾತ್ಯಕ್ಷಿಕೆ ಮೂಲಕ ಸವಿಸ್ತಾರವಾಗಿ ಮಾಹಿತಿ ನೀಡಿದರು.

ಬಿ.ಎಲ್.ಡಿ.ಇ ಆಸ್ಪತ್ರೆಯ ಶಸ್ತ್ರಚಿಕಿತ್ಸೆ ವಿಭಾಗದ ಮುಖ್ಯಸ್ಥ ಡಾ. ಮಂಜುನಾಥ. ಕೋಟೆಣ್ಣವರ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿ, ಎಲ್ಲ ಕ್ಯಾನ್ಸರ್ ಗಳಂತೆ ಜಠರದ ಕ್ಯಾನ್ಸರ್ ಸಹ ತಂಬಾಕು,ಸಿಗರೇಟು, ಸಾರಾಯಿ ಸೇವನೆಯಂಥ ದುಶ್ಚಟಗಳು, ಹೆಚ್ಚು ಹೊತ್ತಿಸಿದ ಎಣ್ಣೆ, ಮಸಾಲೆ ಆಹಾರ ಸೇವನೆ ಹಾಗೂ ಅನುವಂಶಿಕವಾಗಿಯೂ ಬರಬಹುದು. ದೀರ್ಘಕಾಲದ ಗ್ಯಾಸ್ಟ್ರಿಕ್ ಸಮಸ್ಯೆಯೆಂದು ಸುಮ್ಮನಿರದೆ,ತಜ್ಞ ವೈದ್ಯರನ್ನು ಸಂಪರ್ಕಿಸಿ ಸೂಕ್ತ ತಪಾಸಣೆ ಮಾಡಿಸಿಕೊಂಡು ಚಿಕಿತ್ಸೆ ಪಡೆಯಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ವಿಜಯಪುರ ಜಿಲ್ಲಾ ಶಸ್ತ್ರ ಚಿಕಿತ್ಸಕರ ಸಂಘದ ಕಾರ್ಯದರ್ಶಿ ಮತ್ತು ಪ್ರಾಧ್ಯಾಪಕ ಡಾ. ರಮಾಕಾಂತ ಬಳೂರಕರ ಮಾತನಾಡಿ, ಜಠರದ ಕ್ಯಾನ್ಸರ್ ರೋಗಿಗಳಿಗೆ ಬಿ.ಎಲ್.ಡಿ.ಇ ಆಸ್ಪತ್ರೆಯಲ್ಲಿ ಎಲ್ಲ ಬಗೆಯ ಚಿಕಿತ್ಸೆಗಳಿವೆ. ಅಲ್ಲದೇ, ತಜ್ಞ ವೈದ್ಯರು ಲಭ್ಯರಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಸ್ತ್ರಚಿಕಿತ್ಸೆ ವಿಭಾಗದ ಪ್ರಾಧ್ಯಾಪಕರಾದ ಡಾ. ವಿಜಯಾ ಪಾಟೀಲ, ಡಾ. ಗಿರೀಶ ಕುಲ್ಲೊಳ್ಳಿ, ಡಾ. ವಿಕ್ರಂ ಸಿಂದಗಿಕರ,ಡಾ. ದೀಪಕ ಚವ್ಹಾಣ,ಡಾ. ದಯಾನಂದ ಬಿರಾದಾರ,ಡಾ. ಪ್ರದೀಪ ಜಾಜು ಸೇರಿದಂತೆ ಬೋಧಕ ಸಿಬ್ಬಂದಿ ಹಾಗೂ ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

### ವಿಜಯಪುರದ ಬಿ.ಎಲ್.ಡಿ.ಇ ಸಂಸ್ಥೆಯ ವಚನಪಿತಾಮಹ ಡಾ. ಫ. ಗು. ಹಳಕಟ್ಟಿ ಎಂಜಿನಿಯರಿಂಗ್ ಕಾಲೇಜ್

# ದೇಶದ ಅತ್ಯುನ್ನತ 175 ಕಾಲೇಜುಗಳಲ್ಲಿ 28ನೇ ರ್‍ಯಾಂಕ್

■ ಉದಯರಶ್ಮಿ ದಿನಪತ್ರಿಕೆ




ವಿಜಯಪುರ: ನಗರದ ಬಿ.ಎಲ್.ಡಿ.ಇ ಸಂಸ್ಥೆಯ ವಚನಪಿತಾಮಹ ಡಾ. ಫ. ಗು. ಹಳಕಟ್ಟಿ ಎಂಜಿನಿಯರಿಂಗ್ ಕಾಲೇಜಿಗೆ ದೇಶದ ಅತ್ಯುನ್ನತ 175 ಕಾಲೇಜುಗಳಲ್ಲಿ 28ನೇ ರ್‍ಯಾಂಕ್ ಲಭಿಸಿದೆ.

ನ್ಯಾಷನಲ್ ಟೈಮ್ಸ್ ಎಂಜಿನಿಯರಿಂಗ್ ರ್‍ಯಾಂಕಿಂಗ್ ನಡೆಸಿದ ಸಮೀಕ್ಷೆಯಲ್ಲಿ ಈ ಸ್ಥಾನ ಸಿಕ್ಕಿದೆ. ಈ ಸಂಸ್ಥೆ ದೇಶದ ನಾನಾ ಎಂಜಿನಿಯರಿಂಗ್ ಕಾಲೇಜುಗಳ ಸಮೀಕ್ಷೆ ನಡೆಸಿದ್ದು, ಬಿ.ಎಲ್.ಡಿ.ಇ ಎಂಜಿನಿಯರಿಂಗ್ ಕಾಲೇಜು ನಾನಾ ವಿಭಾಗಗಳಲ್ಲಿ ಅತ್ಯುತ್ತಮ ಸಾಧನೆ ಮಾಡುವ ಮೂಲಕ ಗಮನಸೆಳೆದಿದೆ.ಕಾಲೇಜಿನ ವಿದ್ಯಾರ್ಥಿಗಳಿಗೆ ಉದ್ಯೋಗ ವ್ಯವಸ್ಥೆ ಮಾಡುವಲ್ಲಿ ದೇಶದ ಉನ್ನತ 70 ಖಾಸಗಿ ಕಾಲೇಜುಗಳ ಪೈಕಿ ಬಿ.ಎಲ್.ಡಿ.ಇ ಎಂಜಿನಿಯರಿಂಗ್ ಕಾಲೇಜಿಗೆ 43ನೇ ರ್‍ಯಾಂಕ್ ಬಂದಿದೆ. ಅದೇ ರೀತಿ ದೇಶದ 125 ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ 27ನೇ ರಂಕ್ ಬಂದಿದ್ದರೆ

ದಕ್ಷಿಣ ಭಾರತದ ಅತ್ಯುತ್ತಮ 25 ಎಂಜಿನಿಯರಿಂಗ್ ಕಾಲೇಜುಗಳಲ್ಲಿ 15ನೇ ಸ್ಥಾನ ಲಭಿಸಿದೆ.ಕಾಲೇಜಿನ ಈ ಸಾಧನೆಗೆ ಬಿ.ಎಲ್.ಡಿ.ಇ ಸಂಸ್ಥೆಯ ಅಧ್ಯಕ್ಷ ಮತ್ತು ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ, ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಮತ್ತು ವಿಧಾನ ಪರಿಷತ ಶಾಸಕ ಸುನೀಲಗೌಡ ಪಾಟೀಲ ಸಂತಸ ವ್ಯಕ್ತಪಡಿಸಿದ್ದು, ಕಾಲೇಜಿನ ಎಲ್ಲ ಆಡಳಿತ ಮಂಡಳಿ, ಬೋಧಕ ಮತ್ತು ಬೋಧಕರ ಹೊರತಾದ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದ್ದಾರೆ ಎಂದು ಕಾಲೇಜಿನ ಪ್ರಾಚಾರ್ಯ ಡಾ. ಪಿ. ಮಂಜುನಾಥ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಹಾಲುಮತ ಸಮುದಾಯದ ತಾಲೂಕು ಅಧ್ಯಕ್ಷ ಮಲ್ಲಿಕಾರ್ಜುನ ಮದರಿ ವಿರುದ್ಧ ಗಂಭೀರ ಆರೋಪ

# ಮೃತದೇಹವನ್ನಿಟ್ಟು ಪ್ರತಿಭಟನೆ: ಆರೋಪಿಗಳನ್ನು ಬಂಧಿಸುವಂತೆ ಒತ್ತಾಯ

■ ಉದಯರಶ್ಮಿ ದಿನಪತ್ರಿಕೆ




ಮುದ್ದೇಬಿಹಾಳ: ತಾಲೂಕಿನ ನಾಗರಬೆಟ್ಟ ಗ್ರಾಮದ ದಲಿತ ಸಮುದಾಯದ ರವಿಚಂದ್ರ ಮಾದರ ಈತನನ್ನು ಬ.ಬಾಗೇವಾಡಿ ತಾಲೂಕಿನ ಹಂಗರಗಿ ಕ್ರಾಸ್ ಬಳಿಯ ಎನ್.ಎಸ್. ಪೂಜಾರಿ ಕಂಪನಿ ಪ್ಲಾಂಟ್ ಎದುರು ಪೂರ್ವನಿಯೋಜಿತ ಭೀಕರ ಹತ್ಯೆಗೈದ ಅಪರಾಧಿಗಳನ್ನು ಕೂಡಲೇ ಬಂಧಿಸಿ ಗಲ್ಲಿಗೇರಿಸಬೇಕು ಎಂದು ಒತ್ತಾಯಿಸಿ ಇಲ್ಲಿನ ವಿವಿಧ ದಲಿತಪರ ಮತ್ತು ಪ್ರಗತಿಪರ ಸಂಘಟನೆಗಳ ಒಕ್ಕೂಟದಿಂದ ಪಟ್ಟಣದ ಅಂಬೇಡ್ಕರ್ ವೃತ್ತದಲ್ಲಿ ಮೃತದೇಹವನ್ನಿಟ್ಟು ರಸ್ತಾ ಬಂದ್ ಮಾಡಿ ಪ್ರತಿಭಟನೆ ನಡೆಸಿದರು.

ಈ ವೇಳೆ ಡಿಎಸ್–ಎಸ್ ಮುಖಂಡ ಹರೀಶ್ ನಾಟೀಕಾರ ಮಾತನಾಡಿ, 4ವರ್ಷಗಳ ಕಾಲ ದುಡಿಸಿಕೊಂಡು ಮರ್ಮಾಂಗವೇ ಇಲ್ಲದಂತೆ ಕ್ರೂರವಾಗಿ ಹತ್ಯೆ ಮಾಡಿರುವದು ಹೇಯ ಕೃತ್ಯ. ಸಮಾಜದ ತಾಲೂಕು ಅಧ್ಯಕ್ಷರಾದ ಮಲ್ಲಿಕಾರ್ಜುನ ಮದರಿ ಅವರು ಇಂತಹ ಕೃತ್ಯ ಮಾಡುತ್ತಿರುವದು ಇದು ಎರಡನೇ ಬಾರಿ. ಘಟನೆಯ ಬಳಿಕ ನಾನು ಸಿಎಂ ನ ಆಪ್ತ, ನೀವು ದಲಿತರು ನನಗೆ ಏನೂ ಮಾಡಲು ಸಾಧ್ಯವಿಲ್ಲ ಎಂದು ಗರ್ವದಿಂದ ಹೇಳಿದ ಇವರಿಗೆ ನಾವು ಎಲ್ಲಿ ಹೋದರೂ ಬಿಡುವದಿಲ್ಲ. ಸೋಮವಾರದ ವರೆಗೆ ಪೊಲೀಸ್ ಇಲಾಖೆಗೆ ಗಡುವು ನೀಡುತ್ತೇವೆ. ಅಲ್ಲಿಯವರೆಗೆ ಎಲ್ಲ ಆರೋಪಿಗಳನ್ನು ಬಂಧಿಸಬೇಕು. ಇಲ್ಲದೇ ಹೋದಲ್ಲಿ ಜಿಲ್ಲೆಯಾದ್ಯಂತ ಬಂದ್ ಕರೆ ನೀಡುವದಾಗಿ ಎಚ್ಚರಿಕೆ ನೀಡುತ್ತ, ಆತ್ಮಹತ್ಯೆ ಮಾಡಿಕೊಂಡಾದರೂ ಮೃತನ ಕುಟುಂಬಕ್ಕೆ ನ್ಯಾಯ ಕೊಡಿಸುತ್ತೇವೆ ಎಂದು ತಮ್ಮ ಆಕ್ರೋಶವನ್ನು ಹೊರಹಾಕಿದರು.

ಪ್ರಮುಖರಾದ ಸಿ.ಜಿ.ವಿ–ಜಯಕರ, ಬಾಲಚಂದ್ರ ಹುಲ್ಲೂರ, ತಿಪ್ಪಣ್ಣ ದೊಡಮನಿ ಮತ್ತೀತರರು ಮಾತನಾಡಿದರು. ಸುಮಾರು ಹೊತ್ತು ಮೃತ ದೇಹವಿದ್ದ ಅಂಬುಲೆನ್ಸ್ ಎದುರು ಹೋರಾಟಗಾರರು ಧಿಕ್ಕಾರ ಕೂಗುತ್ತ, ಕೂಡಲೇ ಎಲ್ಲ ಆರೋಪಿಗಳನ್ನು ಬಂಧಿಸುವಂತೆ ಒತ್ತಾಯಿಸಿದರು.

ಎಲ್ಲ ಆರೋಪಿಗಳ ಬಂಧನವಾಗುವವರೆಗೆ ಮೃತದೇಹದ ಅಂತ್ಯ ಸಂಸ್ಕಾರ ಮಾಡುವದಿಲ್ಲ ಎಂದು ಪಟ್ಟು ಹಿಡಿದಿದ್ದರು. ಇದರಿಂದ ವಾಹನ ಸಂಚಾರದಲ್ಲಿ ಸಾಕಷ್ಟು ಅಡಚಣೆ ಉಂಟಾಗಿತ್ತು. ಪ್ರತಿಭಟನಾ ಸ್ಥಳಕ್ಕೆ ಇಲ್ಲಿನ ಪಿಎಸ್‌ಐ ಸಂಜಯ ತಿಪರೆಡ್ಡಿ ಭೇಟಿ ನೀಡಿ ಬಸ್ ಸೇರಿದಂತೆ ಇನ್ನಿತರ ವಾಹನಗಳಲ್ಲಿ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವ ಪ್ರಯಾಣಿಕರು ಇರುತ್ತಾರೆ ಎಂದು ಪ್ರತಿಭಟನಾಕಾರರನ್ನು ಮನವೊಲಿಸುತ್ತಿದ್ದಂತೆಯೇ, ಹಿರಿಯ ಹೋರಾಟಗಾರರು ತಕ್ಷಣ ಸ್ಪಂದಿಸಿ ಪ್ರಕರಣದ ಆರೋಪಿಗಳನ್ನು ಬಂಧಿಸದಿದ್ದಲ್ಲಿ ಬರುವ ದಿನಗಳಲ್ಲಿ ಹೋರಾಟವನ್ನು ಉಗ್ರವಾಗಿಸುವದಾಗಿ ಎಚ್ಚರಿಕೆ ನೀಡಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಪ್ರತಿಭಟನೆಯಲ್ಲಿ ಪ್ರಮುಖ ಹೋರಾಟಗಾರರಾದ ಬಸವರಾಜ ಸಿದ್ದಾಪೂರ, ಮಾರುತಿ ಸಿದ್ದಾಪೂರ, ಶೇಕು ಮಾದರ, ಶಿವು ಶಿವಪೂರ ಸೇರಿದಂತೆ ನೂರಾರು ಜನ ಭಾಗಿಯಾಗಿದ್ದರು.

**ಏನಿದು ಘಟನೆ**

ಬಸವನ ಬಾಗೇವಾಡಿ ತಾಲೂಕಿನ ಹಂಗರಗಿ ಗ್ರಾಮದ ಕ್ರಾಸ್ ಬಳಿ ಇರುವ ಎನ್.ಎಸ್. ಪೂಜಾರಿ ಕಂಪನಿ ಪ್ಲಾಂಟ್ ಎದುರು ಮೃತ ವ್ಯಕ್ತಿಯನ್ನು ಮಾರಕಾಸ್ತ್ರಗಳಿಂದ ಕೊಲೆ ಮಾಡಿ, ಪ್ರಕರಣವನ್ನು ಮುಚ್ಚಿ ಹಾಕಲು ನೇಣು ಹಾಕಲಾಗಿದೆ. ಈ ಹಿನ್ನೆಲೆ ಬಸವನ ಬಾಗೇವಾಡಿ ಪೊಲೀಸ್ ಠಾಣೆಯಲ್ಲಿ 14 ಜನರ ವಿರುದ್ಧ ಪ್ರಕರಣ ದಾಖಲಾಗಿದ್ದು, ಆರೋಪಿತರನ್ನು ಬಂಧಿಸಬೇಕಾದ ಬಾಗೇವಾಡಿ ಪೊಲೀಸರು ತಮ್ಮ ಕಾರ್ಯದಲ್ಲಿ ವಿಳಂಬ ನೀತಿ ಅನುಸರಿಸುತ್ತಿದ್ದಾರೆ ಎಂಬುದು ಹೋರಾಟಗಾರರ ಆರೋಪ.

# ವಲಯ ಅರಣ್ಯಾಧಿಕಾರಿಯಾಗಿ ಅಡಿವೆಪ್ಪ ದೊಡಮನಿ ಪದೋನ್ನತಿ :ಸನ್ಮಾನ


■ ಉದಯರಶ್ಮಿ ದಿನಪತ್ರಿಕೆ

ಅಥಣಿ: ತಾಲೂಕಿನ ನದಿ ಇಂಗಳಗಾಂವ ಗ್ರಾಮದ ಹೆಮ್ಮೆಯ ಪುತ್ರ ಅಡಿವೆಪ್ಪ ದೊಡಮನಿ ಅವರು ಉಪ ವಲಯ ಅರಣ್ಯಾಧಿಕಾರಿ ಹುದ್ದೆಯಿಂದ ವಲಯ ಅರಣ್ಯಾಧಿಕಾರಿ ಹುದ್ದೆಗೆ ಪದೋನ್ನತಿ ಹೊಂದಿದ್ದಾರೆ ಈ ಹಿನ್ನೆಲೆಯಲ್ಲಿ ಗ್ರಾಮಸ್ಥರು ಅವರನ್ನು ಸನ್ಮಾನಿಸಿ ಅಭಿನಂದನೆ ಸಲ್ಲಿಸಿದರು.

ಅರಣ್ಯ ಇಲಾಖೆಯಲ್ಲಿ ಪ್ರಾಮಾಣಿಕತೆ ಹಾಗೂ ಕರ್ತವ್ಯನಿಷ್ಠೆಯಿಂದ ಸೇವೆ ಸಲ್ಲಿಸಿದ ದೊಡಮನಿ ಅವರ ಪದೋನ್ನತಿಯು ಇಡೀ ಗ್ರಾಮಕ್ಕೆ ಹೆಮ್ಮೆ ತಂದಿದೆ. ಸದ್ಯ ಅವರು ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಅವರ ಸಾಧನೆಗೆ ಗ್ರಾಮಸ್ಥರು ಸಿಹಿ ಹಂಚಿ ಸಂಭ್ರಮಿಸಿದರು. ಹಾಗೂ ಮುಂದಿನ ಸೇವಾವಧಿ ಇನ್ನಷ್ಟು ಯಶಸ್ವಿಯಾಗಲಿ ಎಂದು ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ನೂತನ ವಲಯ ಅರಣ್ಯಾಧಿಕಾರಿ ಅಡಿವೆಪ್ಪ ದೊಡಮನಿ, ನನ್ನ ಈ ಸಾಧನೆಗೆ ಗ್ರಾಮಸ್ಥರ ಆಶೀರ್ವಾದ ಹಿರಿಯರ ಮಾರ್ಗದರ್ಶನ ಮತ್ತು ಸ್ನೇಹಿತರ ಸಹಕಾರವೇ ಕಾರಣ ಅರಣ್ಯ ಸಂರಕ್ಷಣೆ ನನ್ನ ಮೊದಲ ಆದ್ಯತೆಯಾಗಿದ್ದು ಜನರ ಸಹಕಾರದೊಂದಿಗೆ ಇನ್ನಷ್ಟು ಉತ್ತಮ ಸೇವೆ ಸಲ್ಲಿಸುತ್ತೇನೆ ಎಂದು ತಿಳಿಸಿದರು.

ಈ ವೇಳೆ ಪತ್ರಕರ್ತರಾದ ವಿಲಾಸ ಕಾಂಬಳೆ, ಗೀರೆಪ್ಪಾ ಕಾಂಬಳೆ, ಮಹಾದೇವಿ ದೊಡಮನಿ, ಕಾವೇರಿ ದೊಡಮನಿ, ಸುನೀತಾ ಕಾಂಬಳೆ ಸೇರಿದಂತೆ ಗ್ರಾಮದ ಗಣ್ಯರು ಹಾಗೂ ಪ್ರಮುಖರು ಉಪಸ್ಥಿತರಿದ್ದರು.



**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR